ಅಶ್ವಮೇಧ ಪರ್ವ

[ಯಕ್ಷಗಾನ]

ಕತೆ, ಕಾದಂಬರಿ, ನಾಟಕ, ಭಕ್ತಿ ಗೀತೆಗಳನ್ನು ಬರೆದ ಬಾಳಿಗಪ್ಪ ಶಿವರಾಮ ಹೆಗಡೆ ಅವರು ಈ ಯಕ್ಷಗಾನ ರಚಿಸಿದ್ದಾರೆ. ಮಹಾಭಾರತದ ಹದಿನಾಲ್ಕನೇ ಯದಾದ ಅಶ್ವಮೇಧಪರ್ವವನ್ನು ಯಕ್ಷಗಾನದ ರಾಗ-ತಾಳಗಳಿಗೆ ಹೊಂದಿಸಿ ಸಿದ್ಧಪಡಿಸಲಾದ ಈ ಕೃತಿಯು ಸರಳ ಮತ್ತು ಸುಂದರ ಪದ್ಯಗಳಿಂದ ಸೊಬಗುಗೊಂಡಿದೆ ರಸಿಕರಿಗೆ ರಸದೌತಣವಾಗಿ ಕಾವ್ಯಪ್ರಿಯರಿಗೆ ಪ್ರಿಯಕಾವ್ಯವಾಗಿ ಯಕ್ಷಗಾನ ರಂಗಕ್ಕೆ ಮೆಚ್ಚಿನಕೊಡುಗೆಯಾದ ಈ ಪ್ರಸಂಗವು ಪೌರಾಣಿಕ ವ್ಯಕ್ತಿಗಳ ಪುಣ್ಯಕಥೆಯಾಗಿದ್ದು ತತ್ವಚಿಂತನೆಯು ಸೆಲೆಯಾಗಿದೆ. ಯಕ್ಷಗಾನದ ಹಳೆಯ ಕ್ಲಿಷ್ಟ ಶೈಲಿಯನ್ನು ಸುಲಭ ಹಾಗೂ ಸುಲಭಗೊಳಿಸಿ ಮನಂಬುಗುವಂತೆ ವಿರಚಿಸಲಾಗಿದೆ.

ಆಟವಂತೆ ಕೂಟವ ಅಗತ್ಯವನ್ನೂ ಅಳವಡಿಸಿಕೊಂಡು ಚುರುಕಾದ ಓಟವಿರುವ ಇದರ ಕಥೆಯು ಅರ್ಥವತ್ತಾಗಿ ಸರ್ವರನ್ನೂ ಆಕರ್ಷಿಸುವದು ಎಂಬುದರಲ್ಲಿ ಸಂದೇಹವಿಲ್ಲ. ಸತ್ವಯುತವಾದ ಪಾತ್ರ ಪೋಷಣೆ, ಸನ್ನಿವೇಶ ಕಲ್ಪನೆ, ದೃಶ್ಯಗಳ ಜೋಡಣೆ ಇವುಗಳಲ್ಲೆಲ್ಲ ಪ್ರತಿಭೆಯನ್ನು ಹೊರಹೊಮ್ಮುತ್ತಿದೆ. ಈ ಹೊತ್ತಿಗೆಯಲ್ಲಿ ಸೇರಿಸಿರುವ 'ಕೀಚಕ ವಧೆ'ಯ ದೃಶ್ಯವಂತೂ ಶಾಲೆ-ಕಾಲೇಜುಗಳಲ್ಲಿ ಅಭಿನಯಿಸಲು ಅನುಕೂಲವಾಗುವಂತಿರುವದಲ್ಲದೆ, ಪದ್ಯ ತೆಗೆದರೆ ಉತ್ಕೃಷ್ಟ ನಾಟಕವಾಗುತ್ತದೆ. ಸಾಹಿತ್ಯ ಸಂಭ್ರಮ, ಗೀತ ಗಾಂಭೀರ್ಯ, ಮಾತಿನ ಮಾಧುರ್ಯ ಇವುಗಳಿಂದ ಕೂಡಿ ಕಲಾತ್ಮಕವಾದ ಈ ಪುಸ್ತಕ ಪ್ರತಿಯೊಬ್ಬರೂ ಸಂಗ್ರಹಿಸಲೇಬೇಕಾದುದಾಗಿದೆ.

ಪುಸ್ತಕ ದೊರೆಯುವ ಸ್ಥಳ : **ಶಿವಪ್ರಕಾಶ ಪ್ರಿಂಟರ್ಸ, ದಾಂಡೇಲಿ.**

Scanned by CamScanner

|| ಶ್ರೀ ||

ಕೀಚಕ ವಧೆ

[ಅರ್ಥಸಹಿತ-ಚಿಕ್ಕ ದೃಶ್ಯವೊಳಗೊಂಡು]

ಶ್ರೀಮನ್ಮಹಾಭಾರತದೊಳಗಿನ

ಯಕ್ಷಗಾನ

ಅಶ್ವಮೇಧಪರ್ವ

(ಧರ್ಮಾಶ್ವಮೇಧ)

ರಚಯಿತರು :

ಬಾಳೆಗದ್ದೆ ಶಿವರಾಮ ಹೆಗಡೆ,

ಶಿರಸಿ (ಉ.ಕ.)

ಪ್ರಥಮ ಮುದ್ರಣ : ೧೯೬೭

ದ್ವಿತೀಯ ಮುದ್ರಣ : ೧೯೯೧

ಕ್ರಯ : ಎಂಟು ರೂಪಾಯಿ

Scanned by CamScanner

ಮುದ್ರಣ :
ಶಿವಪ್ರಕಾಶ ಪ್ರಿಂಟರ್ಸ್, ದಾಂಡೇಲಿ.

[ಎಲ್ಲ ಹಕ್ಕುಗಳು ಲೇಖಕರ ವಶ]

ಪ್ರಕಾಶಕರು :
ಶಿವಪ್ರಕಾಶ ಪ್ರಿಂಟರ್ಸ್, ದಾಂಡೇಲಿ

Scanned by CamScanner

29/1/96

ಈ ಕೃತಿಯು ಬಗೆಗೆ........

ಯಕ್ಷಗಾನ ಒಂದು ದೃಶ್ಯ ಕಾವ್ಯ. ನಮ್ಮ ಜನಪದ ಜೀವನಕ್ಕೆ ಬೆಳಕು ನೀಡುತ್ತ ಬಂದ ದೇಶೀಯ ಪ್ರದರ್ಶನ ಕಲೆಗಳಲ್ಲಿ ಇದು ಅಗ್ರಸ್ಥಾನ ತಳೆದಿದೆ.

ವಿಷ್ಣುವಿನ ದಶಾವತಾರ ಕಥೆಗಳೇ ಜೀವಾಳವಾಗಿ ಸಂಸ್ಕೃತ ನಾಟಕಗಳಿಗಿಂತಲೂ ಪೂರ್ವದ ಇತಿಹಾಸ ಪಡೆದ ಗಾನ ಪ್ರಧಾನವಾದ ಈ ನೃತ್ಯ ಕಲೆಯು ಒಂದು ಕಾಲದಲ್ಲಿ ಅನಾಗರಿಕ ಜನಾಂಗದ ಸ್ವತ್ತೆಂದು ಭಾವಿಸಲಾಗಿದ್ದರೂ, ತನ್ನ ಅಂತಃಸತ್ವದಿಂದ ಸುಶಿಕ್ಷಿತ ವರ್ಗಗಳನ್ನು ಆಕರ್ಷಿಸುತ್ತ ವಿದೇಶಗಳಲ್ಲೂ ವಿಜೃಂಭಿಸಲಾರಂಭಿಸಿದೆ.

ಹಿಮ್ಮೇಳದ ಹಿನ್ನೆಲೆಯಲ್ಲಿ ಕಲೆಯ ಕುಂದಣದೊಂದಿಗೆ ಗೀತ-ನೃತ್ಯ ಸಾಹಿತ್ಯ-ಸಾಧನಗಳ ಸುಮಧುರ ಸಂಗಮದಿಂದ ಆವಿರ್ಭವಿಸುವ ರಸಾನುಭವದ ಪರಿಪಾಕವು ಅವರ್ಣನೀಯ. ಆನಂದದ ಆಗರದಲ್ಲಿ ಓಲಾಡಿಸಿ, ಜ್ಞಾನ ಸಾಗರದಲ್ಲಿ ತೇಲಾಡಿಸಿ ಸಂಸ್ಕೃತಿ ಪ್ರಸಾರ ಕಾರ್ಯದಲ್ಲಿ ಅದ್ವಿತೀಯ ಪಾತ್ರ ನಿರ್ವಹಿಸಬಲ್ಲ ಸರ್ವಶ್ರೇಯಪ್ರದವಾದ ನವರಸಪೂರ್ಣ ಕಲಾರಾಧನೆಯ ಈ ದಿವ್ಯ ಸಮಾರಾಧನಾ ಪರಂಪರೆಯನ್ನು ಉಳಿಸಿ ಬೆಳೆಸಿ ಬಾಳಿಸಿಕೊಂಡು ಬರಬೇಕಾದುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಪ್ರಸ್ತುತ ಅಶ್ವಮೇಧ ಪರ್ವವು ಈ ಅರಿವಿನಿಂದಲೇ ಮೈದೋರಿದುದಾಗಿದ್ದು, ಗ್ರಂಥಸ್ಥವಾದ ಕುಮಾರವ್ಯಾಸನ ' ಐರಾವತ ' ವೇ ಮೊದಲ್ಗೊಂಡು ಲಭ್ಯವಾದ ಲಕ್ಷ್ಮೀನಾರ್ಣಪ್ಪ, ಪಾರ್ತಿಸುಬ್ಬ, ದೇವಿದಾಸ ಮುಂತಾದವರ ಎಪ್ಪತ್ತೈದು ಪ್ರಬಂಧಗಳ ಮಾಲಿಕೆಯಲ್ಲಿ ಪೋಣಿಸಲಾದ ಸಮೀಚೀನ ಕೃತಿಗಳಲ್ಲೊಂದಾಗಿದೆ. ದೃಶ್ಯ-ಶ್ರಾವ್ಯಗಳೆರಡಕ್ಕೂ ಹೊಂದುವಂತೆ ಕತೆಯನ್ನು ಅಲ್ಲಲ್ಲಿ ಕೊಂಚ ಮಾರ್ಪಾಟು ಮಾಡಲಾಗಿದ್ದರೂ, ಮೂಲಕ್ಕೆ ಎಲ್ಲಿಯೂ ಧಕ್ಕೆ ಬರದಂತೆ ಜಾಗ್ರತೆ ವಹಿಸಲಾಗಿದೆ.

ವಿರಾಟಪರ್ವದ ಚಿಕ್ಕ ಆದರೆ ಮುಖ್ಯ ದೃಶ್ಯವನ್ನು ಅರ್ಥ ಸಹಿತವಾಗಿ ರಚಿಸಿ ಸೇರಿಸಿದ್ದು ನೂತನ ಕಲಾವಿದರಿಗೆ ಮಾರ್ಗದರ್ಶನ ಮಾಡುವದೆಂದೂ ವಾಚಕಕೋಟಿಯ ವಾಚನ-ಪ್ರದರ್ಶನಾಭಿರುಚಿಗಳನ್ನು ಸಂವರ್ಧಿಸುವದೆಂದೂ ನಂಬಿದ್ದೇನೆ.

Scanned by CamScanner

ದಕ್ಷಿಣ ಭಾರತದ ಪ್ರಾಚೀನ ಸಂಸ್ಕೃತಿಯ ದ್ಯೋತಕವಾಗಿ ವಿಜಯ ನಗರದ ಆಶ್ರಯದಲ್ಲಿ ಒಮ್ಮೆ ಘನತೆಗೇರಿದ್ದ ಯಕ್ಷಗಾನವು, ಪ್ರಚಲಿತ ರಸಕಸಿ ತೊಳೆದು ಮಾಲಿನ್ಯ ಕಳೆದು ಪರಿನಿಷ್ಠಿತ ಗತಿಯಿಂದ ಸುಗಮ ಪಥದಲ್ಲಿ ಸಾಗಿ ಪ್ರಪಂಚಕ್ಕೆ ದಾರಿದೀಪವಾಗಲಿ ಎಂದು ಹಾರೈಸುತ್ತ ಅಳಿಲ ಸೇವೆಯಾಗಿ ಈ ಹೊತ್ತಿಗೆಯನ್ನು ಸಮರ್ಪಿಸಲು ಸಂತೋಷಿಸುತ್ತೇನೆ.

ಈ ಕೃತಿಯನ್ನು ಪ್ರಕಟಿಸಲು ಸ್ವಸಂತೋಷದಿಂದ ಮುಂದೆ ಬಂದ ಶ್ರೀ ಸೀತಾರಾಮ ಹೆಗಡೆಯವರನ್ನು ಅಭಿನಂದಿಸಲೇಬೇಕು. ಈ ದಿಶೆಯಲ್ಲಿ ಅವರಿಂದ ಹೆಚ್ಚಿನ ಸೇವೆ ನಡೆಯಲಿ ಎಂದು ಆಶಿಸುತ್ತೇನೆ.

ಮಹಾ ಶಿವರಾತ್ರಿ,
ಪರಾಭವ ಸಂವತ್ಸರ

ಬಾಳೆಗದ್ದೆ
ಶಿವರಾಮ ಹೆಗಡೆ

ಎರಡನೆ ಮುದ್ರಣ ಕುರಿತು........

ಮೊದಲ ಮುದ್ರಣದ ಪ್ರತಿಗಳೆಲ್ಲ ಮುಗಿದು ಪುನರಾವೃತ್ತಿಯ ಈ ಹೊತ್ತಿಗೆ ಅಗತ್ಯ ಸಲಹೆಗಳನ್ನಿತ್ತು ಸಹಕರಿಸಿದ ಭಾಗವತರು ಶ್ರೀ ಮಂಜುನಾಥ ಭಟ್ಟ ಹೊಸ್ತೋಟ ಅವರಿಗೆ ವಂದನೆಗಳು. ಸುಂದರವಾಗಿ ಮುದ್ರಿಸಿ ಪ್ರಕಟಿಸಿದ ಶ್ರೀ. ಬಸವರಾಜಪ್ಪ ಅವರಿಗೆ ನನ್ನ ನೆನಕೆಗಳು ಸಲ್ಲುತ್ತವೆ.

ಬಾಳೆಗದ್ದೆ
ದಿ ; 14-1-1991

ಶಿವರಾಮ ಹೆಗಡೆ

ಕೀಚಕ ವಧೆ

(ಒಂದು ದೃಶ್ಯ)

ಹಾಗೂ

ಅಶ್ವಮೇಧ ಪರ್ವ

ಯಕ್ಷಗಾನ

ರಚಯಿತರು ;

ಬಾಳೆಗದ್ದೆ ಶಿವರಾಮ ಹೆಗಡೆ

ಶಿರಸಿ (ಉ.ಕ.) 581 336

Scanned by CamScanner

ಅರ್ಪಣೆ :

ಸಹೋದರ,

ಪ್ರಭಾಕರ ಹೆಗಡೆ, M.A.

ಅವರಿಗೆ—

—ಬಾ. ಶಿ. ಹೆ.

Scanned by CamScanner

॥ ಶ್ರೀಃ ॥

॥ ಶ್ರೀ ಭಾಸ್ಕರಾಯ ನಮಃ ॥

ಶ್ರೀಮನ್ಮಹಾಭಾರತದೊಳಗಿನ

ಅಶ್ವಮೇಧ ಪರ್ವ

(ಯಕ್ಷಗಾನ)

ನಾಟಿ ಝಂಪೆತಾಳ

ಶ್ರೀ ವಿಘ್ನೇಶ್ವರನೇ । ಕಾವುದೆನ್ನನು ನೀನೆ । ಭಾವಿಸುತ ವಿಘ್ನವನೆ । ನೀಪುತ್ತಲವ್ರುಗಳನೆ ॥ ಶ್ರೀ ॥ ೧ ॥ ಉತ್ತು ಮನ ನೆಲವನ್ನು । ಬಿತ್ತು ಸುವಿವೇಕವನು । ಕಿತ್ತು ದೌರ್ಬಲ್ಯವನು । ಇತ್ತು ಎನಗಭಯವನು ॥ ಶ್ರೀ ॥ ॥ ೨ ॥

ವಾರ್ಧಕ

ಕರುಣಾಳು ಪರಮೇಶ ಪ್ರಣವರೂಪನೆ ಅಮರ । ಪರಿಪೂರ್ಣ ಸಚ್ಚಿದಾನಂದ ಪಶುಪತಿ ಧೀರ । ಹರ ವರದ ಗಂಭೀರ ತ್ರೈಲೋಕ್ಯಕಾಧಾರ । ಕಾರ್ಯಕಾರಣ ಪುರುಷನೆ ॥ ಗಿರಿಜೆವರ ಪಾಪನಾಶನ ಪನ್ನಗಾಭರಣ ।

Scanned by CamScanner

ವಾಸನ ಗರುಡವಾಹನ ಕರೆದ ದೇವನ | ಪೊರೆಯುವನುತ ಶ್ರೀಚೆನ್ನಕೇಶವನನ್ನು ಧ್ಯಾನಿಸುತ ||೧||

ದ್ವಿಪದಿ

ಶಾರದಾಂಬೆಗೆ ಶಿರವ ಬಾಗಿಸಿಯೆ ನುತಿಸಿ | ಗೌರಿ ಲಕ್ಷ್ಮಿಯರಿಂಗೆ ಮಣಿದು ಸಂಸ್ತುತಿಸಿ ||೧|| ಭಾರತಾಂಬೆಯು ಪಾದಗಳಿಗೆ ಅಭಿನಮಿಸಿ | ಮೀರಿ ವರ ವಾಲ್ಮೀಕಿ ವ್ಯಾಸರನು ಸ್ಮರಿಸಿ ||೨||

ಕಂದ

ಜನಪತಿ ಜನಮೇಜಯನಿಗೆ | ಮುನಿವರ ವೈಶಂಪಾಯನೊರೆದ ಭಾರತದೊಳ್ || ಅನುರಾಗದಿ ವಿರಚಿಪೆ ನಾ | ಘನ ಅಶ್ವಮೇಧಿಕ ಪರ್ವ ಯಕ್ಷಗಾನದೊಳ್ ||೧||

ಸೌರಾಷ್ಟ್ರ ತ್ರಿವುಡೆತಾಳ

ಅವನಿಪನ ಕೋರಿಕೆಯ ಮನ್ನಿಸಿ | ತವಸಿ ನುಡಿದನು ತವಕ ವೀಕ್ಷಿಸಿ | ಅವಧರಿಸು ಸಂಪ್ರೀತಿಯಿಂ ಕಥಿ | ಸುವೆನು ಎನುತ ||೧|| ಆ ಮಹಾ ಕಥೆಯಮೃತ ಪಾನವ | ಪ್ರೇಮದಿಂದಲಿ ಮಾಡಿ ಪಾವನ | ನಾಮ ಕೀರ್ತಿಯ ಪೊಂದು ನೀನೆಂ | ದಾ ಮುನೀಂದ್ರ ||೨|| ಇಷ್ಟ ಸಿದ್ಧಿಯ ಹೊಂದಿ ಬಂಡಿಹ| ಕುಷ್ಟ ವ್ಯಾಧಿಯ ನೀಗಿ ಜನ ಸಂ | ಕಷ್ಟ ಪರಿಹರಿಸೆಂದ ರಾಜಿಸಿ | ಶಿಷ್ಟನಾಗಿ ||೩||

ಭಾಮಿನಿ

ಧರಣಿ ಪತಿ ಧರ್ಮಜನು ಶ್ರೀಹರಿ | ಕರುಣದಿಂದಲಿ ಖೂಳ ಕೌರವ | ರರಿದು ಸೇನಾಸಹಿತ ಜಯಿಸುತ ಅನುಜರನು ಕೂಡಿ || ಧರೆಯ ಧರ್ಮದಿ

ಪಾಲಿಸುತಲಿರೆ । ಭರತ ನಳ ನಹುಷಾದಿ ರಾಯರ । ತೆರದಿ ಕೀರ್ತಿಯ ತಳೆದು ಸಕಲರು ಪೊಗಳುವಂದದಲಿ ।।೧।।

ವಾರ್ಧಕ

ಪರಮ ವೇದವ್ಯಾಸನೊಂದು ದಿನಸೈತರಲು । ಕರ ಮುಗಿದು ಧನ್ಯ ತಾನೆನ್ನುತ್ತ ಸಾಷ್ಟಾಂಗ । ವೆರಗಿ ವಿಸ್ತರದಲ್ಲಿ ಕುಳ್ಳಿರಿಸಿ ವಿನಯದಿಂದಾದರದಿ ಯಮತನುಜನು ।। ಭರದಿಂದಲಿಯೆ ಷೋಡಶೋಪಚಾರವ ಮಾಡಿ। ಶಿರ ಬಾಗಿ ನಿಂದಿರಲು ಮೌನದಲಿ ಸನಿಹದಲಿ । ಇರದೆ ಸುಕ್ಷೇಮ ವಾರ್ತೆಯ ಪ್ರಶ್ನಿಸುತ ಕುಶಲ ಕೇಳುತ್ತೈವರನಾಗಲು ।।೧।।

ಭೈರವಿ, ಝಂಪೆತಾಳ

ಧರ್ಮ ಪ್ರಜೆಗಳು ಸೌಖ್ಯ । ಪೆರ್ಮೆಯೊಳು ಇರ್ದಪರೆ। ಧರ್ಮ-ಕರ್ಮ ಗಳಿಂದ । ನೆಮ್ಮದಿಯಲಿಹರೆ ।।೧।। ಸ್ವಾಮಿ ನಿಮ್ಮಯ ದಯದಿ । ಕಾಮ ಪಿತನನುನಯದಿ । ನೇಮ ನಿಷ್ಠೆಯ ಹೊಂದಿ । ಕ್ಷೇಮದೊಳಗಿಹರು ।।೨।। ಸಂತಸವು ನಿಮ್ಮದ । ತ್ಯಂತ-ಖ್ಯಾತಿಯು ಪಸರಿ । ದಂತಿನಗರದ ಪೇಲ್ಮೆ । ನಿಂತಿರಲಿ ಹಿರಿಮೆ ।।೨।।

ವಾರ್ಧಕ

ಎಂದು ವೇದವ್ಯಾಸ ಧರ್ಮತನಯನ ವದನ ಕಂದಿ ಕುಂದಿರುವದನು ಕಂಡು ಕರುಣದಿ ಮನದ । ದಂದುಗವದೇನೆಂದು ಕೇಳ್ದ ಬಗೆಬಗೆಯಿಂದ ದೇಹದಾಯಾಸವೇನು ।। ಸಂದೇಹವೇನನುಜರಿದಿರಾಡುವವರಲ್ಲ । ಕಂದ ರ್ಶೋನರ್ವಕರಲ್ಲಿ ಅವಿಧೇಯತನವಿಲ್ಲ । ಬಂದಿರುವದೇ ರಾಜಕಾರ್ಯದಲಿ ವಿಘ್ನವದು ಆತಂಕವೇನು ನಿನಗೆ ।।೧।।

ಭಾಮಿನಿ

ಏನ ಪೇಳಲಿ ಹೃದಯ ಬೇಗೆಯ । ದೇನನುಸುರಲಿ ಉಸಿರು ಬಿಗಿವಂ । ತಾನು ಪರಿತಾಪದಲಿ ಬಳಲುತ ಚಡಪಡಿಸುತಿಹೆನು ।। ಹೀನನಾದೆನು ದಾಯವಂದಿರ । ಸೇನೆಸಹಿತಾದ್ಯಖಿಳ ರಾಯರ ಸೂನುಗಳ ಹರಿಸಿದೆನು ತಮ್ಮಂದಿರನು ತೊಳಲಿಸುತ ।।೧।।

ಸಾಂಗತ್ಯ, ರೂಪಕತಾಳ

ಶೋಕಾತಿಶಯದೊಳಗೆ ವ್ಯಾಕುಲ ವಶನಾಗಿ । ಏಕೆನಗಿಂಥ ಸಾಮ್ರಾಜ್ಯ ಸಾಕು ಸಾಕಡವಿಯ ವಾಸ ಮೇಲೆನಿಪುದೆಂ । ದಾಕುಲದಲ್ಲಿ ಕಾಂತೇಯ ॥೧॥ ಕರುಣದಿಂದಲಿ ವೇದವ್ಯಾಸ ಮಹ ಋಷಿ ತಾ । ನೊರೆದನಿದೇನನ್ನುಸುರ್ದೆ ॥ ಧುರವು ಕ್ಷತ್ರಿಯ ಧರ್ಮವದರಿಂದ ಬಂದಿಹ। ದುರಿತ ದೋಷವದೇನು ಪೇಳು ।೨।

ಭಾಮಿನಿ

ಧರಣಿಗೋಸುಗ ಬಂಧು ಬಾಂಧವ । ವರರ ರಣದಲಿ ತರಿದು ಬಾಲ್ಯದಿ । ಪೊರೆದ ಭೀಷ್ಮಾಚಾರ್ಯ ಗುರು ದ್ರೋಣಾದಿಗಳನಿಳುಹಿ ॥ ಅರಿಯದಲೆ ಅಗ್ರಜನ ಸಂಹರಿ । ಸಿರಲು ಪಾತಕ ಮುಸುಗದಿರುವದೆ । ಅರುಹು ಸುಪಥವ ತಿಳುಹು ನೀನೆನಗೆಂದ ಯಮಸೂನು ॥೧॥

ಮಾರವಿ, ಏಕತಾಳ

ಮರುಳರ ತೆರದಲಿ ನುಡಿಯುವರೇನೈ । ಸರಿಯೆಂಬರೆ ಬುಧರು ॥ ಸರಸದಿ ನಗದಿರ್ದಪರೇನೈ ಸರಿ । ಕರು ಮೆಚ್ಚರು ಭೀರು ॥೧॥ ಚಂದ್ರನ ವಂಶದಿ ಜನಿಸಿದ ರಾಜರು । ಹಿಂದಕೆ ಮಹ ಕ್ರತುವ ॥ ಹೊಂದಿಸಿ ಯಶವನು ಪಡೆದರು ಸದ್ಗತಿ । ಹೊಂದಿದರೈ ಸುಖವ ॥೨॥ ಅದರಿಂ ಯಜ್ಞವ ಗೈಯುತ ಗೋತ್ರದ । ವಧೆ ದೋಷವ ಕಳೆದು ॥ ಮುದದಿಂ ಸತ್ಕರ್ಮವ ಮಾಡುತ ಸ । ತ್ಪದಿ ನೀ ಬಾಳುವದು ॥೩॥ ದಶರಥ ಸುತ ಶ್ರೀರಾಮನು ತ್ರೇತದಿ। ದಶವದನಾದ್ಯರನು॥ ನಶಿಸಿರೆ ತುರಗಾಧ್ವರದಿಂದಲಿ ಹಾ। ರಿಸಿದನು ದೋಷವನು ॥೪॥ ಅವನಿಪ ಗೋತ್ರ ವಿಘಾತುಕ ದೋಷಕೆ । ಸವನಿಸು ಯಾಗವನು ॥ ಅವಿರತ ಕ್ರಮದಲಿ ಅವಿರಳದಡಿಯಿಡು । ಅವಿಕಳ ಕ್ರಮದಿನ್ನು ॥೫॥

ಕಾಂಭೋಜ ಝಂಪೆತಾಳ

ದ್ರವ್ಯವೆಮ್ಮಲಿ ಇಲ್ಲ ಸೈನ್ಯದ ಬಲವಿಲ್ಲ । ದಿವ್ಯ ವಾಜಿಯದಿಲ್ಲವಲ್ಲ ॥ ಅವ್ವಳಿಸುವ ಹಾಸು ಅನುಜರಿಂಗೀಗಿಲ್ಲ । ನಿರ್ವಹಿಸುವದೆಂತೈ ಪೇಳು ॥೧॥ ಸೂರ್ಯ ವಂಶದ ಮರುತ್ತರಾಯ ಯಾಗದ ವೇಳೆ । ಈಯಲಗಣಿತ

ಇಟಗಿ ಮಹಾಬಲೇಶ್ವರ ಭಟ್
ಸನ್ ಆಫ್ ರಾಮಕೃಷ್ಣ ಭಟ್
"ವೈಜಯಂತ" ಇಟಗಿ (ಪೋ)
ಸಿದ್ದಾಪುರ (ತಾ) ಉ.ಕ. 581 322

ದ್ರವ್ಯವನ್ನು || ಆಯಾಸದಲ್ಲಿ ಭೂಮಿಸುರರು ಬಿಟ್ಟಿರ್ದುದ | ಲಾಯದವಿದೆ ಹಿಮದ ತಪ್ಪಲೊಳು ||೨||

ನೀಲಾಂಬರಿ ಏಕತಾಳ

ಗೋತ್ರಸಂಹರಣ ಪಾಪ | ಕಳೆಯಲು ವಿಪ್ರ ವಿತ್ತವನಪಹರಿಪ ||
ದಿತ್ತಣ ನ್ಯಾಯ ನೀತಿ | ಮುನಿ ಪುಂಗವ | ಮತ್ತಾವ ಧರ್ಮ ರೀತಿ ||೧||
ಪರಶುರಾಮನ ಶಾಪವ | ನೀನರಿಯೆಯ | ಧರೆ ಸಾರ್ವಭೌಮತ್ವವ ||
ಅರಸು ವಂಶಜನೆ ಪೊಂದೆ | ಯುಧಿಷ್ಠಿರನೆ | ತರಿಸು ಶಂಕೆಯದೇಕೆಂದೆ ||೨||

ಭೈರವಿ ತ್ರಿವುಡೆತಾಳ

ಇಂದು ಭದ್ರಾವತಿಯ ರಾಯನೊ | ಳಿಂದ ಧವಳದ ಹಸಿರು ಬಾಲದ |
ಒಂದು ಕಿವಿ ಘನ ಕಪ್ಪುವರ್ಣದ | ದೊಂದು ಅಶ್ವವ ಬೇಗದಿಂದಲಿ | ತಂದು
ಹಣೆಯೊಳು ಬಿರುದನಂಟಿಸಿ | ಬಂಧಿಸಲುಬಹುದಿದರ ಬೀರರು | ಎಂದು
ಬರಹವ ಬರೆದು ಬಿಡುವದು | ಸಂಮವರೆ ಪರಿಯಂತ ವತ್ಸರ | ಮಿದು
ನುಡಿದ | ದೃಢದಲಿ | ಹೊಂದಿಸೆಂದ ||೧|| ಶೂರರಾದರಸುಗಳು ಕಟ್ಟಲು |
ಸಾರಿರುವ ಬಲದಿಂದ ಬಿಡಿಪುದು | ಭಾರಿ ಕಾಣಿಕೆ ಕಪ್ಪ ಪಡೆವುದು |
ಮೀರಿದರೆ ಯಜಮಾನ ಪೋಗುತ | ಹೋರಿ ಧೈರ್ಯದಿ ಸಾಹಸದಲಾ |
ವೈರಿಯನ್ನು ಜಯಿಸುತ್ತ ಕುದುರೆಯ | ವೀರತನದಲಿ ಬಿಡಿಸಿಕೊಂಬುದು |
ಧಾರಿಣೀಶನೆ ಸರಸಿಜಾಕ್ಷನ | ಕರುಣೆಯಿಂದ | ಉರುತರ | ಹರಕೆಯಿಂದ |೨|

ಭಾಮಿನಿ

ಮುನಿವರೇಣ್ಯನ ನುಡಿಯ ಲಾಲಿಸಿ| ಜನಪ ನುಡಿದನು ಅಸುರವೈರಿಯ|
ಮನವದೆಂತುಟೊ ಅರಿಯೆ ಮುಂದಿನ ಕಜ್ಜ ಉಜ್ಜುಗಿಸೆ || ಎನಲು
ಚಿಂತೆಯದೇಕೆ ಶ್ರೀಹರಿ | ನೆನೆದೊಡನೆ ಬಹ ಬೇಗ ತುರಗಕೆ | ಅಸಿತರಲಿ
ಕಳುಹೆನುತ ನಡೆದನು ವ್ಯಾಸ ಬೋಳವಿಸಿ ||೧||

ವಾರ್ಧಕ

ಧಾರಿಣಿಯಧಿಪ ಕೇಳು ಧರ್ಮಜನು ಪರಮಾತ್ಮ | ಬಾರದಲೆ ಯಾಗ
ಕುಪ ಕ್ರಮಿಸುವದು ತರವಲ್ಲ | ದ್ವಾರಕೆಗೆ ಅರ್ಜುನನ ಕಳುಹುವೆನು

Scanned by CamScanner

ಎಂದೆನುತ ಯೋಚಿಸುತ್ತಿದ್ದನಾಗ ॥ ದ್ವಾರಪಾಲಕನೋರ್ವ ಬಂದು ಪೇಳ್ದ ಸಂಭ್ರಮದೆ । ಊರಮುಂದಕೆ ಮುದದಿ ಕಂಸಹರ ಬಹ ಸಮಯ । ಧರ್ಮಜ ನರುಹಲು ತೋಷವನು ತಾಳಿ ವೈಭವದಿ ಇದಿರುಗೊಳ್ಳಲು ತವಕದಿ ॥೧॥

ಭಾಮಿನಿ

ಪೊರಟು ಅರಮನೆಯಿಂದ ಪರಿಜನ । ಪುರಜನರ ಕೂಡುತ್ತ ಯಮಜನು ಬರಲು ಶ್ರೀಧರನಿಳಿದು ರಥದಿಂದೆರಗಿದನು ಪದಕೆ ॥ ಮರಳಿ ಯಮಸಂಜಾತ ಪೊಡಮಡ । ಲಿರದೆ ಮಧುಸೂದನನು ಎಬ್ಬಿಸಿ । ಭರದಿ ಆಲಂಗಿಸಿದ ಭೀಮಾದಿಗಳನೆಲ್ಲರನು ॥೧॥

ಕಲ್ಯಾಣಿ ಅಷ್ಟತಾಳ

ಬಂದ ಶ್ರೀಕಾಂತನೊಲಿದು। ಅರಮನೆಗೈ । ತಂದ ಶ್ರೀಶೋಲ ನಲಿದು॥ ನಂದ ನಂದನ ಕುಂತಿ ಕಂಡನೊಡಗೂಡುತ । ವಂದ ಹೊಂದುತ್ತ ಸರ್ವರಂದದೊಳಗೊಳ್ಳುತ ॥೧॥ ಮುನಿಗಣ ಸ್ತೋತ್ರಂಗಳ । ಮಾಡುತಲಿರೆ । ಘನಪಾದ ಪಾದಂಗಳ ॥ ದನುಜಾರಿ ನೆರೆದರ ಕಳುಹಿ ಮಜ್ಜಣೆಯಲ್ಲಿ । ವನಿತೆ ದ್ರೌಪದಿ ಕಂಡು ಪದಸಿ ನಲವಿನಲಿ ॥೨॥ ಜನಪನಿಂ ಕನಲಾಘವ । ಪಡೆದು ಪೊಕ್ಕ । ವನಿತರೊಳ್ ಸಭೆ ಸ್ಥಾನವ ॥ ಅನಿಮಿಷೇಂದ್ರನ ಒಡ್ಡೋಲಗ ಮೀರಿಸುವಂಥ ಜನಪೇಂದ್ರನೋಲಗ ವೈಭವ ಪೊಗಳುತ್ತ ॥೩॥ ಧರ್ಮರಾಯಗೆ ಪೇಳಿದ । ದಿನಗಧಿಕದ ಭೋರೆಯಾನೆನುತ ಕೇಳಿದ ॥ ಹರಿಶ್ಚಂದ್ರನಳ ಭೂಪಾಲ ಪುರೂರವ । ಸರಿಯಿ ಸೌಭಾಗ್ಯಕೆ ಈಡಿಲ್ಲವೆನಬವ ॥೪॥ ಒಡನೆ ಧರ್ಮಜ ಬೇಡಿದ । ನಿನ್ನಯ ಕೃಪೆ ಪಡೆದವರೆ ಧನ್ಯರೆಂದ ॥ ತಡವೇಕೆ ಆಲೋಚಿಸಿಹ ರಾಜಕಾರ್ಯವ ಬಿಡದಲಿಪ್ಪಣೆ ನೀಡುವದು ನೀನೆಮಗನ್ನೆ ॥೫॥

ಮಧ್ಯಮಾವತಿ ಏಕತಾಳ

ಧರ್ಮಪುತ್ರನೆ ದುಷ್ಟ ಕೌರವರಳಿದು ನಿಮ್ಮದಾಗಿಹ ದೇಶಕಿನ್ನೇನು ತೊಡರು ॥ ನಿಮ್ಮಕೊಂಡಿರ್ಪರು ಭೀಮಾದ್ಯನುಜರು । ಒಮ್ಮನದೊಳಗಿರಲಿಂತೇನು ಉಸುರು ॥೧॥ ಧರ್ಮರಾಯನು ತನ್ನ ಕರವ

ಮಹಾಬಲೇಶ್ವರ ಭಟ್
ಆಫ್ ರಾಮಕೃಷ್ಣ ಭಟ್
"ವೈಜಯಂತ" ಇಟಗಿ (ಪೋ)
ಸಿದ್ದಾಪುರ (ತಾ) ಉ.ಕ. 581 322

ಜೋಡಿಸುತ । ಪುರಧ್ವಂಸಿಗೆಂದೆನೀ ಮಾತು ನಿಜವೆನುತ ॥ ಅರಿಂಪಿಯ ಈ ಚರಾಚರ ವಿಚಾರವನು । ಸರಿಯಾದ ಕಪಟ ವೇಷವ ತಾಳ್ದೆ ನೀನು ॥೨॥ ದೇವ ನೀ ಚಿತ್ತಯಿಸೆ ಎಮಗಿಂದು ನಿಜದಿ । ಕಾವಳ ಕಳೆದು ಬೆಳಕಾದಂತೆ ಭರದಿ ॥ ಭಾವ ನಿನಗೆ ನಮ್ಮ ಭಾವನಮುಹಲು । ನಾವ್ ಬಹು ತವಕದಿಂದಿಹೆವು ಎನ್ನುತಲು ॥೩॥ ಬಂದು ಬೆಳಗಿನ ವೇಳೆಯಲ್ಲಿ ಕಾರುಣ್ಯ । ದಿಂದ ಆಡಿಸ ವ್ಯಾಸನುಡಿಯನ್ನೆ ನುಡಿದ । ಮುಂದಿನ್ನು ಅಪ್ಪಣೆ ಏನೆಂದು ಕೇಳ್ದ । ವಂದಿಸಿ ಸೋದರರಿಂಗಿತ ಪೇಳ್ದ ॥೪॥

ಸೌರಾಷ್ಟ್ರ, ತ್ರಿವುಡೆತಾಳ

ಅರಸ ಕೇಳ್ ಮುರಹರನು ನಗುತವ। ರರಿಯುದಲೆ ಮಾಕ್ರತುವನೆಸಗುವ ಮರುಳುತನ ಕೈಗೊಂಡರೆನುತವ । ನೊರೆಯುತೆಂದ ॥೧॥ ಅನು ಇರದಿಹ ವೇಳೆಯಲಿ ಮುನಿ । ತಾನು ಬಂದುಪದೇಶಗೈದನೆ । ನೀನು ಸರ್ವವನರಿದು ಚಿತ್ತಕೆ। ಗ್ಲಾನಿ ಬಂತೆ ॥೨॥ ಕಳೆದ ಯುದ್ಧದಿ ಸೈನ್ಯವೆಲ್ಲವು ಅಳಿದುಪೋದುದು ನಿನ್ನ ಅನುಜರು । ಬಳಲಿ ಬೆಂಡಾಗಿಹರು ಅಳವಿಯ । ನೆಳವನೀನು ॥೩॥ ಧರುಮ ಶ್ರೀ ಕೃಷ್ಣಾಂಘ್ರಿಕಮಲದಿ । ಒರಲಿ ಕರುಣದಿ ಕಾಪಿಡೆನುತಲಿ । ಮೊರೆಯಿಡಲು ಅಚ್ಯುತನು ಅಭಯವ । ಕರುಣಿಸಿರ್ದ ॥೪॥

ಕಂದ

ಬಳಿಕಾ ರಾಜೇಂದ್ರನು ತಾ । ತಳೆದಾನಂದವ ಯೌವನಾಶ್ವನಶ್ವವ ತರಲ್ । ಕಳುಹೆ ಭೀಮ ವೃಷಕೇತುವ । ಅಳುಕರಿನಿಂ ಮೇಘನಾದ ಕೂಡಿದ ಬಿನದೊಳ್ ॥೧॥

ಭಾಮಿನಿ

ಮುರಹರನ ಮಹಿಮೆಯನು ಶ್ಲಾಘಿಸು । ತಿರದೆ ಭದ್ರಾವತಿಗೆ ಸಾಗುತ। ಭರದೆ ವಾಜಿಯ ಪಿಡಿದು ರಾಯನ ಬಲವ ಬಡಿದಿರಲು । ತರತರದ ಕಾಣಿಕೆಯ ಸಹಿತಲಿ । ಮಿಸಿದು ಬಹ ಯುವನಾಶ್ವ ದೊರೆಯನು । ಬೆರೆದುಬರಲತಿ ಪ್ರೀತಿಯಿಂ ಸ್ವಾಗತಿಸಿದನು ನೃಪತಿ ॥೧॥

ವಾರ್ಧಕ

ಒಂದು ತಿಂಗಳತನಕ ಹಸ್ತಿನಾವತಿಯೊಳಗೆ । ನಿಂದು ಶ್ರೀಕೃಷ್ಣ ಪರಮಾತ್ಮ ತರುವಾಯ ತಾ । ನೆಂದ ನೃಪನೊಳು ಚೈತ್ರಮಾಸ ಕಳೆಯ

ತಿದೀಗ ಇಲ್ಲಿರ್ದು ಗೈವುದೇನು ॥ ಮುಂದೆ ಯಜ್ಞದಕಾರ್ಯವಾರಂಭವಾಗಿ ಹ । ನ್ನೊಂದು ತಿಂಗಳ ದೀರ್ಘದವಕಾಶವಿದೆ ಮರಳಿ । ಬಂದಪೆನು ಕರಸಿದರೆ ದ್ವಾರಕೆಗೆ ತೆರಳಿ ನಾ । ರಾಜ್ಯಕಾರ್ಯವನು ನೋಡಿ ॥೧॥

ಭೈರವಿ ಏಕತಾಳ

ಬಳಿಕಾ ಹರಿ ದ್ವಾರಕೆಗೆ ತೆರ । ಳಲು ಭೂಪನ ಮನ ಮರುಗಿ । ಕಳವಳದಲಿ ತಲ್ಲಣದೆ । ಇರೆ । ತಿಳಿಯದೆ ಮುಂದೆಂತೆಂದೆ ॥೧॥ ಮುನಿವರ ವೇದವ್ಯಾಸ। ಬಂ । ದನು ಸೂಸುತ ಮೃದುಹಾಸ ॥ ಜನಪಾಗ್ರಣಿ ಪೀಠವನು। ಶಿರ । ಮಣಿಯುತಲಿತ್ತನು ತಾನು ॥೨॥ ವರ ಮುನಿಯೊಡ ಕೇಳಿದನು । ಈ । ಧರುಮ ರಹಸ್ಯಂಗಳನು ॥ ನರರಿಗೆ ಇಹ ಯಶವಾಂತು । ಆ । ಪರ ಸದ್ಗತಿ ಬಗೆಯೆಂತು ॥೩॥

ಸುರುಟಿ, ಏಕತಾಳ

ಧರ್ಮದ ಸಾರವನು । ವ್ಯಾಸನು । ಧರ್ಮಗೆ ಪೇಳಿದನು ॥ ಸ್ಮೃತಿ ನೀತಿ ನಡಾವಳಿ ಸಂಹಿತೆ । ಸಮ್ಮುದದಲಿ ತಾ । ಸೊಮ್ಮನದಿಂದಲಿ ॥ ಧರ್ಮದ ॥ಪ॥ ಅರಿದು ವೇದಾರ್ಥಗಳ । ಸರ್ವರಾ । ಚರಿಸೆ ಸತ್ಕರ್ಮಗಳ॥ ಪರಸತಿ ಪರಧನವೆಂಬಾಸೆಗಳನೆ । ತೊರೆಯೆ ಇಹದ ಯಶ । ಪರದುತ್ತಮ ಗತಿ ॥ ಧರ್ಮದ ॥೧॥ ಹೊಲ್ಲ ಮಾತಾಡದಲೆ । ಅತಿಥಿಗೆ । ಇಲ್ಲವೆಂದೆನ್ನದಲೆ ಸಲ್ಕ್ರಿಯೊಳಾರ್ಜಿತ ದ್ರವ್ಯದಿ ಗೋಗಳ । ದಲ್ಲದೆ ಹರಿವ್ರತ । ದಲ್ಲಿರೆ ಮನುಜಗೆ॥ ಧರ್ಮದ ॥೨॥ ಎಂದಾ ಮುನಿವರನು । ನುಡಿದನು । ಹೊಂದಿಸು ದ್ರವ್ಯವನು ॥ ಬಂದಿತು ಯಜ್ಞದ ಕಾಲವದೀಗ ಮು । ಕುಂದನ ಕರೆಕಳು । ಹೆಂದನು ಜವದಲಿ ॥ ದರ್ಮದ ॥೩॥

ಭಾಮಿನಿ

ಅರಸ ಹಿಮಗಿರಿಯೊಳಿಹ ಧನವನು । ತರಿಸಿ ಅತ್ಯುತ್ಸವದಿ ದೇವನ । ಕರೆತರುವದೆಂದನಿಲಜಗೆ ಆಜ್ಞಾಪಿಸಿದನಾಗ॥ ಪೊರಟು ಪವನಜ ದ್ವಾರಕೆಯೊಳಾ ಸಿರಿ ರಮಣನಂ ಕಂಡು ಸಂತಸ । ದೊರೆಯೆ ಹರಿಯಾದವರ ಗಡಣದಿ ಬಂದ ಗಜಪುರಕೆ ॥೧॥

Scanned by CamScanner

ವಾರ್ಧಿಕ

ಇಂತಿರಲು ಜಾಹ್ನವಿಯ ತೀರದಲಿ ಶಾಸ್ತ್ರಮತ। ದಂತೆ ವಿರಚಿಸಿ ಯಜ್ಞಶಾಲೆಯನು ಭಕ್ತಿಯಲಿ । ಕಂತುಪಿತ ಬಾದರಾಯಣರಾಜ್ಞೆಯಿಂ ಸರ್ವ ಗೋತ್ರಮುನಿಗಳ ಕರೆಯಿಸಿ ॥ ಸಂತಸದಿ ಧರ್ಮ ಭೂಪಾಲ ಅಧ್ವರದ ವಿಧಿ । ಯತೆ ದೀಕ್ಷಿತನಾಗಿ ಯಜ್ಞಾಶ್ವವರ್ಚಿಸುತ । ಲಂತೆ ವಸನಾಭರಣ ಗಂಧಮಾಲೆಗಳಿಂದಲಂಕರಿಸಿ ಉತ್ಸವದಲಿ ॥೧॥

ಕೇದಾರಗೌಳ, ಅಷ್ಟತಾಳ

ಚಂದ್ರವಂಶದ ರಾಜ ಪಾಂಡವಾಗ್ರಜನದಿ । ಬಂದಿದನಂ ತಡೆದು ॥ ಬಂಧಿಸಬಹುದು ಬೀರರು ಎಂದೆನ್ನುತ । ಲಂದು ಬರಹ ಬರೆದು ॥೧॥ ಕನಕ ಮಯದ ಪಟ್ಟೆಯನ್ನು ಆ ಕುದುರೆಯ । ಪಣೆಯೊಳಂದದಿ ಕಟ್ಟುತ॥ ದಿನದಲಾ ಚೈತ್ರದ ಶುದ್ಧ ಪೌರ್ಣಿಮೆಯಂದು । ಬಿಡದೆ ಬಿಟ್ಟರು ಅವರು ॥೨॥ ಭೂಪತಿ ಯಾಗಕೆನುತ್ತಲಿ ಅಸಿಪತ್ರ । ನೋಂಪಿಯೊಳಿರುತಿರಲು ॥ ಶ್ರೀಪತಿ ಆಜ್ಞೆಯಿಂ ಅರ್ಜುನ ಮುಂದಾಗಿ । ಕಾಪಿಡಲಶ್ವವನು ॥೩॥ ಅನುಸಾಲ್ವ ಸಾತ್ಯಕಿ ಪ್ರದ್ಯುಮ್ನ ಕೃತವರ್ಮ । ಘನ ಚತುರಂಗ ದಳ॥ ಅನುವಾಗೆ ಯೌವನಾಶ್ವನು ಅತಿ ಬಲದೊಡ । ನನುಕರಿಸೆ ಕರ್ಣಜ ॥೪॥

ಕಾಂಬೋಧಿ, ಮಟ್ಟೆತಾಳ

ಒಡನೆ ಗಣಪನನ್ನು ಪೂಜೆಗೈದು ಪಾರ್ಥನು । ಬಿಡದೆ ನವಗ್ರಹಗಳನ್ನು ಬೇಡಿಯಾತನು ॥೧॥ ಧರ್ಮರಾಯ ಭೀಮ ಕುಂತಿಯರಿಗೆ ವಂದಿಸಿ। ನಮ್ರನಾಗಿ ಕಾಮನಯ್ಯಗೆರಗಿ ಭಾವಿಸಿ ॥೨॥ ದಿಗಧಿಪರನು ಬೇಡಿ ಹರಕೆ ತಳೆದು ಮುನಿಗಳ ಗಗನ ಮುಟ್ಟುವಂಥ ಘೋಷವಾಂತು ಮಂಗಳ ॥೩॥ ಪೊರಡೆ ಬಲವು ಶರಧಿ ತೆರದಿ ತೆಂಕುಮುಖದಲಿ। ತುರಗ ಸ್ವೇಚ್ಛೆಯಾಗಿ ನಡೆಯಲದತ ನಡೆಯಲಿ ॥೪॥

ಭಾಮಿನಿ

ಧರುಮರಾಯನು ಅಶ್ವಮೇಧಕೆ । ತುರಗ ಬಿಡಲದು ಮಾಹಿಷ್ಮತಿ ಪುರ। ವರಕೆ ಬರೆ ದೊರೆಗುವರ ಬಂಧಿಸಿ ಎದುರಿಸುತಲೊರಗೆ ॥ ಅರಸಿ ಜ್ವಾಲೆಯು ಪಾವಕನ ಬಲ । ದಿರಿಸೆ ಪಾಂಡವ ಅವನ ಮೆಚ್ಚಿಸಿ । ಮೆರೆಯೆ ಗಂಗಾದೇವಿ ಯಿಂದಲಿ ಶಾಪ ಬರಿಸಿದಳು ॥೧॥

Scanned by CamScanner

ಮಧ್ಯಮಾವತಿ, ತ್ರಿವುಡೆತಾಳ

ಜನಪನೀಪರಿಯಿಂದ ಕಾಮುತ । ದಣಿದು ನೀಲಧ್ವಜನು ಕೃಷ್ಣನ । ವಿನಯದಿಂದಲಿ ಒಪ್ಪಿಸಿದ ನಿಜ । ಯನಿಗೆ ಮಣಿದು ॥೧॥ ನರನು ನೀಲಧ್ವಜನ ಮಾನಿಸಿ । ತುರಗ ಹಿಂಬಾಲಿಸುತ ತೆಂಕಿಗೆ । ಸರಿದು ಸೇನಾಸಹಿತ ವಿಂಧ್ಯದ ಗಿರಿಗೆ ನಡೆದು ॥೨॥ ವೃಕ್ಷ ಲತೆಗಳ ಕುಸುಮ ಫಲಗಳ । ಯಕ್ಷ ಕಿನ್ನರ ಗಣಗಳನು ತಾ । ಋಕ್ಷ ವಾನರ ಸಂಕುಲವನುರೆ । ಲಕ್ಷಿಸುತ್ತ ॥೩॥ ಚಿತ್ರಜನಿತನ ಮುನಿ ಸೌ । ಭರಿಯ ಮತದಿಂ ಚಂಡಿಶಾಪವ । ಸ್ಮರಿಸಿ ಪರಿದು ಭೀಮಾನುಜನು ಚಂಪಕ । ಪುರಕೆ ಬರಲು ॥೪॥

ವಾರ್ಧಕ

ಶ್ರೀಲ ಹಂಸಧ್ವಜನು ಚಂಪಕಾ ನಗರವನು । ಆಳುತಿರ್ದನು ಧರ್ಮ ನ್ಯಾಯ ನಿಷ್ಠುರತೆಯಿಂ । ಬಾಳುತಿರ್ದಾ ಶಂಖ ಲಿಖಿತ ಪೌರೋಹಿತರ ಬುದ್ಧಿ ವಾದವ ಮೀರದೆ ॥ ಬಾಲಕರು ನಾಲ್ವರತಿ ಧುರ ಧೀರ ಸಂಪನ್ನ । ರೇಳು ಜನ ಅನುಜರಿಪ್ಪತ್ತು ದಳಪತಿ ಸಹಿತ । ಮೇಳವಿಸಿ ಮೂವರು ಪ್ರಧಾನಿಗಳೊಡ ತಾನು ಸಚ್ಚರಿತ ಸುವಿವೇಕಿಯು ॥೧॥

ಮುಖಾರಿ, ಏಕತಾಳ

ದೊರೆ ಹಂಸಧ್ವಜ ಲಾಲಿಸು ಬೇಹಿನ । ಚರ ನಾನೊರೆಯುವ ಮಾತುಗಳ ॥ ಪರ ರಾಯರ ದಂಡೊದಗಿದೆ ನಮ್ಮಯ । ಪುರ ಗಡಿ ಬಳಿ ದಾಡಾಯಿಸಿದೆ ॥೧॥ ತುರಗವು ಒಂದಿದೆ ಸೀಮೆಗೆ ಬಂದಿದೆ । ಬಿರುದಾವಳಿ ಪಣೆಗಂಟಿಸಿದೆ ॥ ಬರುತಿಹ ಕಾವಲ ಸೇನೆಯು ಪಾಳಯ । ಏರಿಸಿದೆ ಸಾಗರ ಮೀರಿಸಿದೆ ॥೨॥ ಕರಿಪುರದರಸ ಯುಧಿಷ್ಠಿರನೆಂಬನ । ತುರಗಾಧ್ವರ ಯಜ್ಞಾಶ್ವವಿದು ॥ ನರನಿಹ ಬೆಂಗಾವಲಿಗೆ ಸಮರ್ಥರು । ತರುಬಲುಬಹುದೆಂದಿದೆ ಬರವು ॥೩॥ ಚರನಿಂತೊರೆದಾ ನುಡಿಗಳನಾಲಿಸಿ । ಹರುಷದ ಹೊಳೆಯಲಿ ಈಜಾಡಿ ॥ ತರಿಸಿದ ಬೆಲೆ ಬಾಳುವ ವಸನಂಗಳ । ಇರಿಸಿದನಾತನ ಕರಗಳಲಿ ॥೪॥

ಸೌರಾಷ್ಟ್ರ, ತ್ರಿವುಡೆತಾಳ

ಅರಸ ಹಂಸಧ್ವಜನು ಧರ್ಮನ । ತುರಗ ಕಾವಲಿಗಿರ್ದ ಫಲ್ಗುಣ ಬರುತಲಿಪ್ಪುದ ಕೇಳಿ ಸಚಿವರ । ಕರೆಸುತಾಗ ॥೧॥ ತ್ವರದಿ ಪೇಳಿದನಿಂತು

Scanned by CamScanner

ಕುದುರೆಯು । ತರಿಸಿ ಸಿತವಾಹನನ ಇದಿರಿಸೆ । ಹರಿಯು ಬಹ । ಸಿರಿಚರಣ ಸೇವಿಪೆ । ನಿರಪೆ ಬೇಗ ।।೨।। ಕರುಣಿಸಿದರೆನ್ನನು ವಿರೋಧಿಸಿ । ಧರೆಯು ವೈಕುಂಠವದು ದೊರೆವುದು । ನರನನೆದುರಿಪುದೆನೆ ಪ್ರಧಾನರು । ಸರಿಯುದೆನಲು ।।೩।। ತನ್ನ ಮೋಹದ ಕುವರನಾದ ಸು । ಧನ್ವನೊಳು ಕುದುರೆಯನು ಕಟ್ಟು ವು। ದೆನ್ನುತಲಿ ತವಕದಲಿ ಮಾಧವ । ನನ್ನು ಕಾಣೆ ।।೪।। ಅಪ್ಪಣೆಯು ಮಾಡಿದನು ರಾಯನು । ತಪ್ಪದಲೆ ಚತುರಂಗ ಬಲವದು । ಒಪ್ಪಿ ಬರೆ ಡಂಗುರವ ಹೊಯಿಸಿದ । ನಪ್ರತಿಮನು ।।೫।। ಮತ್ತೆ ಯುದ್ಧಕೆ ವಿಮುಖ ನಾದಗೆ । ತಪ್ತತೈಲ ಕಟಾಹ ಶಿಕ್ಷೆ ಎ । ನುತ್ತ ವಿಪ್ರರ ನಿಯಮವಿರ್ಪುದ । ನೊತ್ತಿ ಸಾರ್ದ ।।೬।।

ಮಾರವಿ, ಝಂಪೆತಾಳ

ಮುರಹರನ ಸ್ಮರಿಸುತ್ತ । ಅರಸ ಸನ್ನಹದೊಡನೆ । ಧುರಕೆಂದು ಪೊರಡೆಸುಕು। ವರನಾ ಸುಧನ್ವ ।।೧।। ಇರದೆ ಮಾತೆಯ ಕಂಡು । ಹರಕೆ ತಾ ಪಡೆದು ಬರು । ತಿರಲು ಸೋದರಿಯು ಬೆಳ । ಗಿರಲು ಆರತಿಯ ।।೨।। ಆನಿತರಲಿ ತನ್ನ ಅರ । ಮನೆಗೆ ಬರಲಾಕ್ಷಣದ । ವನ ಪಟ್ಟದರಸಿಯಳು । ಇನಿಯನಿದಿರ್ಗೊಳಲು ।।೩।।

ಪುನಾಗ, ಏಕತಾಳ

ಮತಿಯುತೆಯಾ ಪ್ರಭಾ । ವತಿಯು ಐತರಲು ।। ಅತಿಯಾದ ಪ್ರೀತಿ ಕಾತರವ ತೋರುತಲು।।ಪ।। ಚಂದ್ರಮಂಡಲ ಪೋಲ್ವ ಮುಖದಿ ಎಳೆನಗೆಯು। ಚಂದ್ರಿಕೆ ಪಸರಿಸಿದಂತೆ ಸೊಗಸಿರಿಯು ।। ಚಂದ್ರತಿಲಕವು ಅನುರಾಗದ ಕರೆಯು। ಇಂದ್ರನೀಲದ ಮಣಿ ಕಾಂತಿ ಮುಂಗುರುಳು ।।೧।। ಉತ್ತಮೋತ್ತಮವಾದ ರೇಶಿಮೆ ಉಡುಗೆ । ಮುತ್ತು ರತ್ನ ಹೊನ್ನು ಶೋಭೆಯ ತೊಡುಗೆ ।। ಮತ್ತೆ ಘಮಘಮಿಸುವ ಮಲ್ಲಿಗೆ ಮುಡಿಗೆ । ಮತ್ತ ಗಜಗಾಮಿನಿ ಪದಗತಿ ನಡಿಗೆ।೨। ಅಚ್ಚಿನ ದಂತ ಪುತ್ಥಳಿಯ ವೈಖಾಟ। ಮುಚ್ಚುವ ತನ್ನನೀಕ್ಷಿಪರ ಕಣ್ನೋಟ।। ಮೆಚ್ಚುವ ಸರ್ವಾಲಂಕಾರ ಕುಲುಕಾಟ । ಬೆಚ್ಚುವ ಮನದಲಿ ಭಾವ ಸೆಣಸಾಟ ।।೩।। ಒಲವಿಂದ ನಲ್ಲನ ಬರವನೀಕ್ಷಿಸುತ । ನಲವಿಂದ ಸರ್ವಾಂಗ ಸುಂದರಿ ಬರುತ ।। ಗೆಲವಿಂದ ಹಂಸದ ಗತಿಯೊಳಡಿಯಿಡುತ । ಚೆಲವಿಂದ

Scanned by CamScanner

ರತಿದೇವಿಯನ್ನು ನಾಚಿಸುತ ||೪|| ತಂಪಾದ ಗಂಧ ಕಪ್ಪುರ ವೀಳ್ಯ ಪಿಡಿದು| ಸೊಂಪಾದ ಕಂಪಿನ ಸಂಪಿಗೆ ಪಡೆದು|| ಇಂಪಾದ ಗಾನವ ಗುಣಿಸಿ ಉರವಣಿಸಿ|| ಪೆಂಪಾದ ಸುಣ್ಣಿನ ಪ್ರಭೆ ಆವಿರ್ಭವಿಸಿ ||೫||

ಮಧುಮಾಧವಿ, ತ್ರಿವುಡೆತಾಳ

ಓರೆನೋಟದಿ ನೋಡಿ ಗೃಹದೊಳ | ಸಾರಿ ಪುಷ್ಪವ ಸ್ವೀಕರಿಸುತ್ತಲಿ | ವೀರಿ ತಾಂಬೂಲವನು ಕೊಳ್ಳುತ | ತೋರಿಸದೆ ಚಾಂಚಲ್ಯವ || ಸ್ವೈರಣೆಯಲಿ ||೧|| ಮಡದಿಯನು ವೀಕ್ಷಿಸುತಲಾಗಲೆ | ನುಡಿದ ಬವರದಲಿಂದು ಪಾರ್ಥನ| ತಡೆದು ತೋರಿಪೆನೆನ್ನ ವಿಕ್ರಮ | ಒಡನೆ ಬೀಳ್ಕೊಡು ಭಾಮಿನಿ || ತಡೆಯ ಬೇಡ ||೨|| ನರನ ನೆರವಿಗೆ ಹರಿಯು ಬರೆ ಮಿಗೆ | ಮೆರೆವೆ ಸಾಹಸದೋರಿ ಮೆಚ್ಚಿಸಿ | ಬರುವೆ ಕ್ಷಿಪ್ರದಿ ಜಯವಧುವ ಪಿಡಿ | ತರುವೆ ನಮ್ಮಯ ನಗರಕೆ|| ತರುಣಿ ಕೇಳು ||೩|| ಎನಲು ರಾಗದಿ ಯುಕ್ತಮಲ್ಲಿದು | ಅನುವರದಿ ಜಯಲಕ್ಷ್ಮಿ ಆರಿಗೊ | ಕನಲದಲೆ ನುಡಿ ಕೇಳ್ವುದಾದೊಡೆ | ಇನಿಯ ನುಡಿಯುವೆನೊಂದನು || ಇನಿವಾತನು ||೪|| ಚಕ್ರಿಗಭಿಮುಖನಾಗಿ ಹೋಗಲು ಮುಕ್ತಿಯಲ್ಲದೆ ಜಯವು ದೊರೆವುದೆ | ಯುಕ್ತಿ ಬೇರಿನ್ನುಂಟೆ ಯೋಚಿಸು | ಯುಕ್ತಾಯುಕ್ತಗಳಾ | ಸಕ್ತಿಯಿಂದ ||೫||

ಸಾವೇರಿ, ಆದಿತಾಳ

ರಮಣಿ ಅಭದ್ರ ಮಾತೇಕೆ | ಬಲವನು ಮೆರೆಸಿ | ಅಮಿತ ಕೀರ್ತಿಯ ಪೊಂದುವೆ || ಕ್ರಮಿಪೆ ಕೈಮೀರ್ದೊಡಾದೊಡೆ | ವೀರರಿಗುಚಿತ | ಅಮರ ಸನ್ನಿಧಿ ಸೇರುವೆ ||೧|| ಪುತ್ರರು ಇಲ್ಲದವರಿಂಗೆ | ಗತಿಯದು ಇಲ್ಲ | ಸತ್ಯ ಸ್ಥಿತಿಯನರಿಯೆ|| ಪುತ್ರೋತ್ಪಾದನ ಕಾಲವು | ಸನ್ನಿಹಿತವಿದು| ಉತ್ತಮವಾಗಿ ಇರ್ಪುದು ||೨|| ಬಿನ್ನಪವನ್ನು ಲಾಲಿಸು | ಋತುವೇಳೆ ಮನ | ದನ್ನ ಎನ್ನನು ಮಾನಿಸು|| ಮನ್ನಿಸು ತನುಜಹೀನಳು| ಕಳುಹುವದೆಂತು| ಸುನ್ನೆಯ ಪೊರಪಡಿರು ||೩|| ಎನಲು ವಲ್ಲಭೆ ಕೇಳದೊ | ಭೇರಿ ಭಾಂಕಾದಿ | ನಿನದ ಬಾನನು ಬಿರಿವುದು || ಇನಿಯಳೆ ತರವದಲ್ಲೆಂದು | ಗಲ್ಲವ ಪಿಡಿದು | ಅನಕ ನಿಂದಿರಲ್ ತಡೆದು ||೪||

ಸಾವೇರಿ, ರೂಪಕತಾಳ

ತಂದೆ ಯುದ್ಧಕೆ ಪೋಗಿಹನು ಎನ್ನ ಕಾಣದೆ । ಇಂದು ಕ್ರೂರದ ಶಿಕ್ಷೆ ವಿಧಿಸಬಹುದೆಂದೆ ।।ಪ।। ಕಳುಹುವಳಾಗು ನೀ ಬೇಗ ಪೋಗುವೆ ಕಾಂತೆ । ಕಳಯುತ ಬರಿದೆ ವೇಳೆಯ ನೀನಿಂತೆ ।। ಮುಳಿಯದೆ ಬಿಡ ತಾತನು ತಡವಾದೊಡೆ । ಬಳಲಿಸಬೇಡನ್ನೈ ಅನುಚಿತವು ನೋಡೆ ।।೧।। ಅಂಗನೆ ಸಮ್ಮತಿಸದಲೆ ಪತಿಯೊಡನಾಗ । ಸಂಗನ ಸಮರಕ್ಕಂಜುತಿದೀಗ ।। ಸಂಗ ರಕ್ಕೆಳಸುವ ನಿನ್ನ ನಾ ಬಿಡೆನೆನುತ । ಸಂಗ ಮಾಳ್ಪುದುಚಿತವೆಂದೆನುತ ।।೨।।

ಭಾಮಿನಿ

ಭರದೆ ಮನ್ಮಥಕೇಳಿಗೆಳಸುತ । ಲಿರದೆ ತನ್ನಯ ಪೀನ ಕುಚಗಳ । ಉರದಪೊತ್ತುತ ಕೇಳಿಗೃಹಮಂ ಸೇರಿ ಪವಡಿಸಲು ।। ತರುಣಿ ಕೋರಿಕೆ ಯುಕ್ತವಾಮಮ । ವರ ಋಷಿಗಳಭಿಮತಕೆ ಸರಿಯಿಂ । ದರಿದು ಋತು ಸ್ನಾತೆಯನು ಒಡಗೂಡುತಲಿ ರಮಿಸಿದನು ।।೧।।

ವಾರ್ಧಕ

ಬಂದು ರಣರಂಗದಲಿ ಕಾಣದೆ ಸುಧನ್ವನನು । ಹಿಂದುಳಿದ ರಣಕೆನುತ ಹಂಸಧ್ವಜನು ಸಿಡಿಮು। ಕಂದನನು ಕುದಿವೆಣ್ಣೆ ಕೊಪ್ಪರಿಗೆಯೊಳು ನೂಕಿಸಲು ವಿಪ್ರ ಕಟ್ಟಳೆಯೊಳು ।। ನಿಂದಿರಲು ನಿಶ್ಚಲತೆಯಿಂದ ಮನದೊಳಗೆ ಗೋ । ವಿಂದ ನಾಮವ ಧ್ಯಾನಿಸುತ್ತಿರಲು ದೇಹವದು । ಬೆಂದುಹೋಗದೆ ಎಣ್ಣೆ ತಣ್ಣೀರಿನಂತಾಯ್ತು ಸರ್ವರುಂ ನೋಡುತಿರಲು ।।೧।।

ದ್ವಿಪದಿ

ಭರತ ಕುಲ ತಿಲಕ ಕೇಳ್ ಹಂಸಧ್ವಜನು ಮಗನ। ಕರೆದು ಬಿಗಿದಪ್ಪಿದನು ನೆನೆದು ಹರಿಯನ್ನ ।।೧।। ಎರಗಿ ಭಕ್ತ ಸುಧನ್ವ ತಂದೆ ಚರಣದಲಿ । ಪರಸುತಿರೆ ಶಂಖ ಲಿಖಿತಾದ್ಯರನಿತರಲಿ ।।೨।। ಪೊರಟ ತೇರನು ಏರಿ ಸಾರಥಿಯು ಸಹಿತ । ತುರಗ ನಿಲಿಸಿದ ಪದ್ಮವ್ಯೂಹ ರಚಯಿಸುತ ।।೩।।

ವಾರ್ಧಕ

ಇತ್ತ ಪ್ರದ್ಯುಮ್ನ ಕುದುರೆಯನು ಬಿಡಿಸುವೆನೆನಲು । ಮತ್ತೆ ಯವನಾಶ್ವ ನೀಲಧ್ವಜರು ಶಕ್ತಿ ಮೆರೆ । ಸುತ್ತಲಿರೆ ವೃಷಕೇತು ಸೆಣಸುತ್ತ

Scanned by CamScanner

ಸುಧನ್ವನಲಿ ತೀಕ್ಷ್ಣ ಬಾಣವ ಸುರಿಸಲು || ಕತ್ತರಿಸಿ ಶರದಿಂದ ಕರ್ಣಜನ ನೋಯಿಸಲು | ಸಾತ್ಯಕಿಯು ಕೃತವರ್ಮ ಅನುಸಾಲ್ವರೆದುರಾಗೆ ಮುತ್ತಿ ಚದುರಿಸಲವರನೆಲ್ಲರಂ ಚಾರರಿದನೊರೆದರಾ ಬೀಭತ್ಸುಗೆ |೧|

ಸಾರಂಗ, ಅಷ್ಟತಾಳ

ಜನಮೇಜಯನೆ ಲಾಲಿಸು | ಧನಂಜಯನು | ರಣಕೆ ಅಣಿಯಾದ ನೊಗಸು || ಅನುಚಿತ ಇನ್ನು ವಿಲಂಬನ ಮಾಳ್ಪುದು | ಎನುತಲಿ ದಿವ್ಯ ಸ್ಯಂದನ ಸಿದ್ಧಗೊಳಿಸುತ ||೧|| ವೀರಾಂಜನೇಯಗೆರಗಿ ನಿಯಮದಲ್ಲಿ 1 ಧೀರ ಸುರರಿಂಗೆ ಬಾಗಿ || ಶ್ರೀರಮಣ ಧ್ಯಾನದಿ 1 ಮುಂದರಿಯುತ ರಥವ 1 ನೇರಿ ಸುಧನ್ವನ ಸರಿಸಕೆ ಸಾಗಲು ||೨|| ಪಾರ್ಥ ಮೂಲೋಕದೊಳು 1 ಅಜೇಯನೆ ಆ | ಪಾರ್ಥ ನನ್ನಿದಿರಿನೊಳು || ಪಾತ್ರೇಯ ಪಟುಭಟನೆಂದೆ ಬಂದೆನುತ | ಸಾರ್ಥಕವಾಯಿತೆಂದಸ್ತ್ರದಿ ಕೆರಳಿಸೆ ||೩|| ಮರುಳನಂತಾದೆ ನೀನು 1 ಸುಧನ್ವ ನಂ 1 ಗರದ ಗರ್ವವ ನೀಗಿಸ್ಸು || ಗುರು ದ್ರೋಣ ಕರ್ಣನ ಪರಿಯ ಅರಿಯೆಯ ನರ 1 ಸುರ ಅಸುರರಲಿ ವೈರದಿ ಬದುಕಿಹರುಂಟೆ ||೪|| ಸಾರಥಿಯ ಬಲದಿಂದಲಿ | ಗೆಲಿದುದು ಬಲ್ಲೆ | ಕೌರವಾದ್ಯರ ಮೊದಲಲಿ || ಶೌರಿಯ ಕರೆಸಿ ಎನ್ನೊಳು ಯುದ್ಧಮಾಳ್ಪುದು | ಶೂರನೆನುತ್ತಲೆ ನಿಶಿತ ಬಾಣದಿ ಹೊಡೆಯೆ ||೫||

ಶಂಕರಾಭರಣ, ತ್ರಿವುಡೆತಾಳ

ನರನ ರಥವದು ಬುಗುರಿಯಂದದಿ | ತಿರುಗೆ ಗಿರ್ರನೆ ಆಕ್ಷಣ || ತರಳ ಮೆಚ್ಚಿದೆ ಮೆಚ್ಚಿದೆನು ನಿ | ನ್ನಿರವನಿಂದು ||೧|| ಮೂರು ಲೋಕದಿ ನನ್ನ ರಥವನು | ಆರು ಕದಲಿಸಲಾಪರು || ಶೂರನಾಗಿಹೆ ನೀನು ಪಟುಭಟ 1 ಧೀರನಹುದು ||೨|| ಆಡೊಡೇನ್ ಸಮರದಲಿ ನಮ್ಮೊಡ | ಕಾದಲಿಕೆ ನೀ ಬಾಲನು || ತಾತನನು ಕಳಿಸೆಂದು ಜರಿಯುತ 1 ಆತನೆಚ್ಚ ||೩|| ತಂದೆ ಕುದುರೆಯ ಬಿಡುವನಲ್ಲವು | ಹಿಂದಿರುಗುವದುಚಿತವು || ಹೊಂದಿಸುವ ಯಾಗವನು ಮುಂದಕೆ | ಸಂಧಿಸೆಂದ ||೪|| ದಿವ್ಯರಥ ಶರ ಚಾಪ ಕಪಿಧ್ವಜ 1 ಅಕ್ಷಯ ದೇವದತ್ತವು|| ಸವ್ಯಸಾಚಿತ್ವಗಳು ಇರಲು ಸು | ಧನ್ವ ಕೇಳು ||೫|| ಈ ತ್ರಿಭುವನವ ಜಯಿಸಬಲ್ಲೆನು| ಮಾತ್ರ ಎಷ್ಟರವನೊ ನಿ| ಘಾತಿಸುವದೇಕೆಂದಿ ತಾಳು ನಿ 1 ಶಾತ ಕಣೆಯ ||೬||

ಯಮುನಾ ಕಲ್ಯಾಣಿ, ಮಟ್ಟೆತಾಳ

ಎಲಾ ಧೀರನೆ । ಕಂಡೆಯೇನು । ಧೀರನೆ । ಭರಾಟೆ । ಎಲಾ ಧೀರನೆ ||ಪ|| ಎಲವೆಲವೊ ಧೀರನೆ । ಬಲಮೆಯಲ್ಲಿ ಬೀರನೆ । ಎಲಾ ಧೀರನೆ ||ಅ.ಪ.|| ನಿನ್ನ ತೀಕ್ಷ್ಣ ಬಾಣಗತಿಯ । ನಿನ್ನು ವೀಕ್ಷಿಸು || ತಾ । ನೆನ್ನ ಶೌರ್ಯದೆದುರು ನಿ । ರ್ವಿಣ್ಣನಾಯಿತು ||೧|| ಪೊಕ್ಕು ಸಾರಥಿಯಲೀನಕ್ಕು ಜಯವದು । ನೀ । ತಕ್ಷಣ ಶ್ರೀ ಕೃಷ್ಣನ ಕರೆ । ಬಕ್ಕು ಜಯವಧು ||೨||

ನಾದನಾಮಕ್ರಿಯೆ, ರೂಪಕತಾಳ

ಪಾಂಡವನತಿ ಕೋಪದಿಂದ । ಖಾಂಡವ ವನ ದಹನಕಾಲ । ಮೂಡಿಗೆ ಯಲಿ ತಾನೆ ಸೇರಿ । ಕೊಂಡ ಆಜ್ಞೇಯಾ || ಮೂಡಿಗೆಯಲಿ ತಾನೆ ಸೇರಿ । ಕೊಂಡ ಆಜ್ಞೇಯಾಸ್ತ್ರವನ್ನು । ಹೂಡಿಬಿಟ್ಟನು । ಹೂಡಿಬಿಟ್ಟನು ||೧|| ಎಚ್ಚಲಸ್ತ್ರ ಕಾರ್ಚುಚ್ಚು । ಹೊಚ್ಚಿದಂತೆ ಮುಚ್ಚಿನಿಂದು । ಕಿಚ್ಚುಕಾರಿ ಸಕಲಸೇನೆ ಕೊಚ್ಚುವಂದದಿ || ಕಿಚ್ಚುಕಾರಿ ಸಕಲಸೇನೆ । ಕೊಚ್ಚುವಂದ ದಹಿಸುತಿರಲು । ರೊಚ್ಚಿನಿಂದಲಿ । ರೊಚ್ಚಿನಿಂದಲಿ ||೨|| ಅರಿದು ವೀರನಾ ಸುಧನ್ವ। ಮೆರೆದು ಶೌರ್ಯವನ್ನು ತೋರಿ । ವರುಣ ಅಸ್ತ್ರವನ್ನೆ ಹೂಡಿ । ಅಗ್ನಿಜ್ವಾಲೆಯ || ವರುಣ ಅಸ್ತ್ರವನ್ನೆ ಹೂಡಿ । ಅಗ್ನಿಜ್ವಾಲೆಯನ್ನು ತಾನು। ಶಾಂತಗೊಳಿಸಿದ। ಶಾಂತಗೊಳಿಸಿದ ||೩|| ಇದನು ಕಂಡು ಪೃಥೆಕುಮಾರ । ನದಕೆ ವಾಯುವ್ಯ ಹೂಡಿ । ಎದುರು ಬಂದ ಅದ್ರಿ ಬಾಣ । ಮದವ ಮುರಿಯಲು || ಎದುರು ಬಂದ ಅದ್ರಿ ಬಾಣ ಮದವ ಮುರಿಯೆ ಐಂದ್ರ ಶರವ । ಕನಲಿ ಬಿಟ್ಟನು । ಕನಲಿ ಬಿಟ್ಟನು ||೪||

ಪಂಚಾಗತಿ ಮಟ್ಟೆತಾಳ

ಮತ್ತೆ ಬೆಂಬತ್ತಿ ಪಾರ್ಥ । ನೊತ್ತಿ ತಿಮಿರನಾಯಕಾಸ್ತ್ರ । ಸತ್ವದಿಂದ ಬಿಡೆ ಸುಧನ್ವ । ನತ್ತಲಾಗಲು ||೧|| ಇದಕೆ ಬೆದರೆನೆಂದು ತಾನು । ಹದನದ ರವಿ ಚಾಪವನ್ನು । ಇದಕೊ ಸೈರಿಸೆಂದು ಕನಲು । ತದನು ಬಿಸುಟನು ||೨|| ಪಾರ್ಥ ಸರ್ಪಾಸ್ತ್ರ ಬಿಡಲು। ಧಾತ್ರಿಪಾಲನಣುಗ ಗರು । ಡಾಸ್ತ್ರದಿ ಪರಿಹರಿಸಿ ಮೆರೆದ । ಸತ್ವಾಧಿಕ್ಯದಿ ||೩|| ಒಬ್ಬರೊಬ್ಬರನ್ನು ಗೆಲಲು । ಉಬ್ಬರದಿ ಬ್ರಹ್ಮಾಸ್ತ್ರ ಬಿಡಲು । ಅಬ್ಬರಿಸುತೊಮ್ಮೆ ಎರಡೂ । ಸ್ತಬ್ಧವಾದವು. ||೪||

ಮಲೆತ ಬ್ರಹ್ಮಾಸ್ತ್ರ ಅಡಗೆ । ಕಲಿ ಸುಧನ್ವನನ್ನು ಗೆಲಿವ । ಅಳವು ತಿಳಿಯ
ದಾಗಿ ಪಾರ್ಥ । ಕಳವಳಗೊಳ್ಳೆ ॥೫॥ ಕುಂತಿ ತನಯ ಶಿವನ ಕೂಡ ।
ನಿಂತ ಸಾಮರ್ಥ್ಯವೆಲ್ಲಿ । ಮುಂತೆ ನೀ ನಿವಾತ ಕವಚ । ರೆಂತು ಸೀಳ್ದಿಯ॥೬॥
ಭೀಷ್ಮ ದ್ರೋಣ ಕರ್ಣ ಮಾದ್ರ । ದೀಶರನ್ನು ಗೆಲಿದು ಕೆಲೆದ। ಧಾರ್ಷ್ಟ್ಯವೆಲ್ಲಿ
ಸಾಕು ಕರೆಸು । ಕೇಶವನನ್ನು ॥೭॥ ಎನುತ ಸುರಿಸೆ ಬಾಣ ವರ್ಷ। ಹನುಮ
ಬಸವಳಿಯಲು ಅಶ್ವ। ಮಣಿದು ನಿಲಲು ತಡೆಯದಾಗ । ಕಣೆಯ ಘಾತವ॥೮॥

ನೀಲಾಂಬರಿ, ಏಕತಾಳ

ಸೂತನಳಿಯೆ ಸೇನೆ ಚದುರುತಲಿರಲು । ಪಾರ್ಥ ತಾನೇ ಸಾರಥ್ಯ
ಗೈಯುತಲು ॥೧॥ ತನ್ನ ಮನದೋಳಿವನ ಜಯಿಸುವ ಬಗೆಯು । ಇನ್ನು
ಕಾಣದಲ್ಲಾ ಎಂತಹ ಪರಿಯು ॥೨॥ ಇಂಥ ಸ್ವಲ್ಪ ಶೂರನನ್ನು ಮಥಿಸದನ್ನ
ಕುಂತಿ ಪಡೆದಳೇಕೊ ವ್ಯರ್ಥನಾಗೆನ್ನ ॥೩॥ ಶಿವ ಶಿವ ಧರ್ಮಪುತ್ರನ ಯಜ್ಞ
ಕೆಂತು । ಕವಿಯಿತೆ ವಿಘ್ನವು ಮುಂದೇನು ಎಂತು ॥೪॥ ದೇವ ನಿನ್ನ ನಂಬಿ
ನಮಗೀ ಗತಿಯೆ । ನಾವು ನಿನ್ನಭಯ ಹೊಂದಿರಲೀ ಸ್ಥಿತಿಯೆ ॥೫॥ ಭಕ್ತ
ಬಾಂಧವ ಶ್ರೀ ಕೃಷ್ಣ ದಯಮಾಡು । ಯುಕ್ತವೆ ನಿನಗಿದು ಎಮಗೆ ಕೃಪೆ
ಮಾಡು ॥೬॥ ಎಂದು ಧ್ಯಾನಿಸೆ ಪಾರ್ಥ ನಿಶ್ಚಲ ಮನದಿ । ಬಂದ ಧಾವಿಸಿ
ಗೋವಿಂದನು ಮುದದಿ ॥೭॥ ಶರಣಾರ್ತಿಭಂಜನ ಗರುಡವಾಹನ । ನರನ
ರಥಾಗ್ರದಿಳಿದು ವಾಘೆಯ ಕೊಂಡ ॥೮॥

ಭಾಮಿನಿ

ಕೂಡಲೆ ಸಾಕಲ್ಯ ವಾದ್ಯಗ । ಳಾಡೆ ಸರ್ವರ ಮುಖದಿ ಕಳೆ ಕುಣಿ ।
ದಾಡೆ ಸಂತೋಷಾತಿಶಯದಿಂ ನರನ ಸೈನ್ಯದಲಿ ॥ ಪಾಂಡುಪುತ್ರನ ಮೈದಡವಿ
ಹರಿ । ಗಾಡದಿಂ ಬಿಗಿದಪ್ಪಲಿದನಂ । ನೋಡುತಿದ್ದ ಸುಧನ್ವ ರೋಮಾಂಚನ
ವಗೊಳ್ಳುತಲಿ ॥೧॥

ವಾರ್ಧಕ

ಅನವರತವೂ ತಾನು ಧ್ಯಾನಮಾಡುತಲಿರ್ದ । ಘನ ಮಹಿಮ
ನಿರ್ಮಲಾತ್ಮನ ದಿವ್ಯಮೂರ್ತಿಯಂ । ತನುವನೀಡಾಡಿ ಸಾಷ್ಟಾಂಗ ವಂದನೆ
ಗೈದು ತನ್ನಂತರಂಗದೊಳಗೆ॥ ಜನುಮ ಸಫಲವದಾಯ್ತು ನಿನ್ನ ದರುಶನದಿಂದ

Scanned by CamScanner

ಎನುತ ಪ್ರಾರ್ಥಿಸಿ ಬಹಳ ಭಯ ಭಕ್ತಿಯಿಂ ಬಳಿಕ । ಅನುನಯದಿ ನುತಿಸಿ
ಸಂಸಾರ ಪಾಶವ ಬಿಡಿಸು ನೀನೆನ್ನನೆಂದು ಒರಲಿ ॥೧॥

ಕೇದಾರಗೌಳ, ಝಂಪೆತಾಳ

ಹರಿ ನಿನ್ನ ಕೃಪೆಯಿಲ್ಲದೆ । ಪಾಂಡವರಿ । ಗಿರುವದೇ ಜಯ ಕಾಣದೆ ॥
ಇರಲಿರಲಿ ನಿನ್ನ ಮುಂದೆ । ಪ್ರತಿಜ್ಞೆಯ । ನರನೆಸಗಿ । ನಡೆಸಲೆಂದೆ ॥೧॥
ಎಲೆಲೆ ಅವಿವೇಕಿ ನಿನ್ನ । ಶರ ಮೂರು । ಗಳಲಿ ಕೆಡಹದಿರೆ ಮುನ್ನ ॥
ತಿಲಮಾತ್ರ ಸುಕೃತವಿರದ । ದುರ್ಗತಿಯು ಬಳಲಿಸಲಿ ಎನ್ನನೆಂದ ॥೨॥
ಅರ್ಜುನನ ಶಪಥ ಕೇಳಿ । ಶ್ರೀ ಕೃಷ್ಣ । ಘರ್ಜಿಸಿದ ಕೋಪ ತಾಳಿ ॥
ದುರ್ಜಯನು ಇವನು ಎಂಥ । ಕಠಿಣ ಪ್ರ । ತಿಜ್ಞೆ ಮಾಡಿದೆಯೊ ಇಂಥ ।೩।
ಕಲಿ ಸುಧನ್ವನು ನುಡಿದನು । ನಡುಮಾರ್ಗ । ದಲಿ ಖಂಡಿಸದಲೆ ನಾನು ॥
ಉಳಿದೆನಾದರೆ ಜಗದಲಿ । ಸರ್ವ ಅಘ । ಕಿಳಿದವನ ಗತಿಯಾಗಲಿ ॥೪॥
ಎನುತ ಪ್ರತಿಶಪಥ ಮಾಡಿ । ಮಹದಸ್ತ್ರ । ವನು ಬಿಡಲು ಸೆಳೆದು ಪೂಡಿ ॥
ದನುಜಾರಿ ಪಾರ್ಥನೊಡನೆ । ಆ ಸ್ಯಂ । ದನವು ಹಿಂಜಾರೆ ಒಡನೆ ॥೫॥
ಮುಗಹಸನು ತಲೆದೂಗುತ । ಸುಧನ್ವನ । ನುರೆ ಪೊಗಳಿದನು ಮೆಚ್ಚುತ ॥
ನರಗೆಂದ ಜಯದ್ರಥನಲಿ । ಸೆಣಸಿದಾ ಪರಿಯು ಇಂದಿನ ದಿನದಲಿ ॥೬॥ ಈ
ವೀರನಾರಿಂದಲೂ । ಮರಣಿಸನು । ಆವನಿಹ ಗೆಲ್ಲುವವನು ॥ ಭಾವಿಸದೆ
ನೀನೆನ್ನನು । ಶಪಥವನು । ಗೈವುದೇ ಮಾಳ್ಪೆನೇನು ॥೭॥ ಇವನೇಕಪತ್ನಿ
ವ್ರತನು । ಪಿತನಾಜ್ಞೆ । ಲವಲೇಶ ಮೀರದವನು ॥ ಕವಿದರಾದರೂ ಸಮರದಿ।
ಮೂರ್ತಿತ್ರಯ । ರವರಿಗೂ ಅಂಜ ನಿಜದಿ ।೮। ನಿನ್ನನೇ ಹೀಗಳೆದನು ।
ಶೌರ್ಯದಿಂ । ದೆನ್ನನೂ ಬಳಲಿಸಿದನು ॥ ಇನ್ನೇನು ಮೂಲೋಕವ ।
ಮೆಚ್ಚಿಸಿದ । ಧನ್ಯನೇ ಬಾಲಕನಿವ ॥೯॥

ಸೌರಾಷ್ಟ್ರ, ತ್ರಿವುಡೆತಾಳ

ಬೆಟ್ಟವನು ಕೊಡೆಹಿಡಿದೆ ಯಾದವ। ಬಟ್ಟೆ ನೆನೆಯದ ಹಾಗೆ ಪಾಂಡವ।
ರಷ್ಟರನು ರಕ್ಷಿಸುವೆ ಹರಿ ನಾ । ನೆಷ್ಟರವನು ।೧। ನರನನೆದುರಿಸಿ ಹರಿಯ
ಮೆಚ್ಚಿಸಿ। ಧರೆಯೊಳಧಿಕದ ಕೀರ್ತಿ ಸ್ಥಾಪಿಸಿ । ಮೆರೆದೆ ಮನ ಸಂಕಲ್ಪ ಸಿದ್ಧಿಸಿ।
ಗುರಿಯ ಜೈಸಿ ।೨। ಹರಿಯೆ ನಿನಗೀ ದೇಹವನು ಸ । ಮರದಿ ಒಪ್ಪಿಸದೇ
ಬಿಡೆನು ಕಿಂ । ಕರನು ನಾನೆನುತೆಚ್ಚಿ ರೋಷದಿ । ನರನು ಕುದಿದು ।೩॥

Scanned by CamScanner

ಶಂಕರಾಭರಣ, ಮಟ್ಟೆತಾಳ

ಒಂದು ಮಹದಸ್ತ್ರವನ್ನು ಆಕರ್ಣಾಂತ ಸೆಳೆಯೆ । ಹಿಂದೆ ಗೋಕುಲವನು ಪಾಲಿಸಿರ್ದ ಸುಕೃತವ। ಅಂದು ಶ್ರೀಕೃಷ್ಣನಿತ್ತು ಶತ್ರು ಶಿರವಿಳುಹುವಂತೆ ಹೊಂದಿಸಿರಲು ಕಲಿ ಸುಧನ್ವನದನ ಖಂಡಿಸೆ ।।೧।। ಬಳಿಕ ದಿವ್ಯಾಸ್ತ್ರವೊಂದು ಹರಿಯ ಕೃಷ್ಣಾವತಾರ । ದಿಳೆಯೊಳಾರ್ಜಿಸಿರುವ ಪುಣ್ಯ ಪಡೆದು ಬಂದುದು ।। ಕಳೆದುಕೊಂಡೆಯಲ್ಲ ಕೃಷ್ಣ ಪುಣ್ಯವೆಂದು ಕೋಪದಿಂದ । ಇಳಿಸಿದ ಸುಧನ್ವ ನೆಲಕೆ ಇಕ್ಕಡಿಗೈದ ।।೨।। ಕೊನೆಯ ಬಾಣ ಪೊತ್ತು ತ್ರ್ಯಮೂರ್ತಿ ದಿವ್ಯ ಶಕ್ತಿ । ಧನುರ್ವೇದ ಮಂತ್ರಶಕ್ತಿ ಸಹಿತ ಬರಲದ ।। ಗನೆದು ವೀರ ತುಂಡರಿಸಿದ ಮುಂದಿನರ್ಧ ಮಾತ್ರ ಮಸ್ತ । ಕವನು ಚಿಮ್ಮಿ ಹರಿಯ ಪಾದಗಳಲಿ ಕೆಡಹಿತು ।।೩।।

ತೋಡಿ, ಅಷ್ಟತಾಳ

ಕೇಳಿದ। ಭೂಪ । ಕೇಳಿದ ।।ಪ।। ಕೇಳಿದ ರಣವಾರ್ತೆ ಚಾರಮುಖದಿಂದ ತಾಳಿದ ಭೀಷಣ ರೋಷದುನ್ಮಾದ ।।ಅ.ಪ.।। ಸುರಥ ಸುಧನ್ವನ ಸಾವಿನಿಂದಲಿ ಕನಲಿ । ಧುರಕೆ ಪೋಗುತ ಪೌರುಷವ ಮೆರೆಸುತಲಿ । ಶಿರವ ನೊಪ್ಪಿಸಿ ಮರಣವನಾಂತನಲ್ಲಿ । ವರ ಪಾರ್ಥನಾಟೋಪ ಕೆಡೆವ ಬಗೆಯಲ್ಲಿ।೧। ಕುವರರನಳಿದ ವೈರಿಯ ಬಾಳಿಸುವದೆ। ಜವದಿಂದ ಸವರುವೆ ಕವಿದು ನಾನಿಂದೆ। ಭುವನದಲಿನ್ನೇಸು ಸುಖವೆನಗೆಂದೆ । ಬವರ ಸನ್ನಹಕಾಜ್ಞೆಯಿತ್ತು ಸಂಭ್ರಮದೆ ।೨।

ಶಂಕರಾಭರಣ, ಮಟ್ಟೆತಾಳ

ಬಂದು ರಣದಿ ಹಂಸಧ್ವಜನು ಚಾಪಹೂಡುತ । ನಿಂದು ಅಟ್ಟಹಾಸಗೈಯೆ ನರನನರಸುತ ।। ತಂದು ತೋರಿರೆಂದು ತನ್ನ ಮಂದಿಗರುಹಲು । ಕೊಂದು ಬಿಸುಟೆ ಪೋಪೆನೆಂದು ಕಿಡಿಯ ಕಾರಲು ।।೧।। ಸತ್ಯಲೋಕದಲ್ಲಿ ಸೃಷ್ಟಿಕರ್ತನಳುಕಿದ । ಅತ್ತ ರವಿಯ ಮಂಡಲವದು ನಡುಗೆ ಗದಗದ । ಪೃಥ್ವಿ ಕಂಪಿಸುತಲು ಸುರರು ಗಜಬಜಿಸಿದರು । ಇತ್ತ ಜಲಜನಾಭ ಚಿಂತಿಸಿದನು ಮನದೊಳು ।೨। ವನರುಹಾಕ್ಷ ಇನ್ನು ನಮಗದೆಂತು ಜಯವದು ಎನುತ ಕುದುರೆಗಳನು ಸೈರಿಸೆಂದು ನರನೊಳು ।। ಅನಘ ರಥವನಿಳಿದು ಗಂಭೀರ ಗತಿಯೊಳು । ಜನಪ ಹಂಸಕೇತು ಸನಿಹಕವನು ನಡೆಯಲು ।।೩।। ಬರುತ

Scanned by CamScanner

ಲಿಹುದ ಕಂಡು ಮಂಗಳದ ಮೂರ್ತಿಯ । ಮರೆತು ಹಂಸಧ್ವಜನು ಮನದ ವ್ಯಥೆಯ ಭ್ರಾಂತಿಯ ॥ ಕರದಲಿದ್ದ ಬಾಣ ಧನುವನಿರಿಸಿ ರಥದಲಿ । ಭರದಿ ಕೆಳಗೆ ಧುಮುಕಿ ಎರಗಿ ಹರಿಯ ಪದದಲಿ ॥೪॥ ದೇವ ದೇವ ನೀನು ಇಲ್ಲಿ ಬಿಜಯಮಾಡಿದ । ಭಾವವೇನು ಎಂದು ಕರವಮುಗಿದು ಕೇಳಿದ ॥ ನಾವು ನರನ ನೆರವಿಗಿರುವದರಿದು ದುಡುಕಿದೆ। ನೋವ ನೂಕು ಎನುತಲೊರೆದ ಕೃಷ್ಣ ಕರುಣದೆ ॥೫॥ ತುರಗ ಕಟ್ಟಿ ಪುತ್ರರಟ್ಟಿ ಕಾದಿಯೇಕೆಲಾ । ಧುರದಿ ನರನ ಗೆಲುವೆನೆನುವ ಕ್ಷಾತ್ರವೇಕಲಾ ॥ ಇರಲಿ ಸಾಕು ಸಾಕು ಮಿತ್ರಭಾವದಿಂದಲಿ । ಬೆರೆಯೊ ನಮ್ಮ ಯಜ್ಞ ಕುದುರೆ ಬಿಟ್ಟು ಸುಖದಲಿ ॥೬॥ ಅರಸನೊರೆದ ಅರಸುತನದ ಧರ್ಮ ಚರಿಸಿದೆ । ಇರದು ಚಿಂತೆ ನಿನ್ನ ದರುಶನದಲಿ ಹರುಷದೆ॥ ಮರೆತೆ ವ್ಯಥೆಯನೆನ್ನ ನನ್ನಿಯಿಂದ ಮಾಣದೆ । ಕರುಣೆ ಪುಂಡರೀಕ ನಾಭನಭಯವಿತ್ತೊಡೆ ॥೭॥

ಕಾಪಿ, ಅಷ್ಟತಾಳ

ಜನನಾಥ ದಿವ್ಯವಿಗ್ರಹವ। ನೋಡಿ। ಮನದಣಿ ಸ್ತೋತ್ರ ಮಾಡಿದನಂದು ಪ್ರಭುವ ॥೮॥ ಘನ ರಜದಲಿ ಬ್ರಹ್ಮನೆನಿಸಿ । ತಮದಿ । ತ್ರಿನಯನನಾಗಿ ಸತ್ವದಿ ವಿಷ್ಣುವೆನಿಸಿ ॥ ಎನಿತ ಲೀಲೆಯ ಮೆರೆಸುತಿರುವೆ । ನಿನ್ನನಿನಿತು ಬಣ್ಣಿಸಲಾರೆ ಲೋಕೈಕ ಗುರುವೆ ॥೧॥

ಭಾಮಿನಿ

ಸಖ್ಯದಿಂ ಆದರಿಸು ಹಯ ಮೇ । ಧಕ್ಕೆ ನೆರವನು ನೀಡು ಪುತ್ರರ । ದುಃಖವಂ ಕಳೆಯೆನುತ ಹಂಸಧ್ವಜನ ತಕ್ಕೈಸಿ ॥ ಚಕ್ರಧರ ಪಾರ್ಥನೊಡ ಸ್ನೇಹವ। ಚಕ್ರವರ್ತಿಗೆ ಗೈಸಿ ನಗರವ। ಪೊಕ್ಕು ಮನ ಸಂತುಷ್ಟವಾಗಿರಲೈದು ದಿನವುಳಿದು ॥೧॥

ಕಂದ

ಧನುರ್ಧರನಿಂ ಬೀಳ್ಕೊಂಡು । ಅನುಗೈದು ಹಸ್ತಿಪುರಕಭಿಮುಖನಾದಂ। ಮುನಿಜನ ದರ್ಶನ ದುರ್ಲಭ । ಗೆನಿತು ಮಮತೆಯೊ ಅಮಮಾ ಪಾಂಡು ಪುತ್ರರೊಳ್ ॥೧॥

ಆರ್ಯಾ ಸವಾಯಿ

ಧಾರಿಣಿಪತಿ ಹಯಮೇಧಾಶ್ವವು ತಾ। ಸಾರಲು ಸ್ತ್ರೀಯರ ಸೀಮೆಯಲಿ। ಚಾರಿಣೆಯರು ಅದನೀಕ್ಷಿಸಿ ಬೆದರುತ । ಸಾರಿದರಾಗ ಪ್ರಮೀಳೆಯಲಿ ॥೧॥

ಮುಖಾರಿ, ಏಕತಾಳ

— ಆಲಿಸಿ ಕೇಳಮ್ಮ ರಾಣಿ । ಫಣಿವೇಣಿ ಜಾಣೆ । ಆಲಿಸಿ ಕೇಳಮ್ಮ ರಾಣಿ ॥ಪ॥ ಬಂದಿದೆ ಹಯವೊಂದು ಪೊಸತು। ತಂದಿದೆ ಇಲ್ಲಿ । ಮುಂದಿ ಪ್ರಾರ್ಬಲ ಅಬ್ಧಿಯನಿತು ॥ ಚಂದ್ರವಂಶದ ಧೊರೆ । ಅಧ್ವರವೆಸಗಲ್ಕೆ । ತಂದುದು ರಾಜ್ಯಕೆ । ಹಿಂದಿಹನರ್ಜುನ । ಬಂಧಿಸೆ ಬಲು ಬಲ । ದಿಂದ ಬಿಡಿಸನೆಂ । ಬಂಪದಿ ಪಣೆಯೊಳ । ದೊಂಡುಲೇಖವಮ್ಮ ॥೧॥

ದೇಶಿ, ಏಕತಾಳ

ಕೇಳಿ ನಸುನಗುತ ಲಾಯ । ದಿರಿಸಲಾ ಹಯ । ಪೇಳಿ ಪೊರವುಡುತ ಪಾಯ ॥ ಕಾಳಗ ಕಣದಿ ಫಲ್ಗುಣನೆದುರಿಸೆ ಪ್ರ । ಮೀಳೆ ಸ್ತ್ರೀದಳಕೆ ಆಣತಿಯಿತ್ತು ನೆರಹುತ ॥ಪ॥ ತಟ್ಟನೆ ಚಪಲಾಕ್ಷಿಯರ। ಪೂರ್ಣಚಂದ್ರ । ಬಟ್ಟಲ ಮುಖ ನೀರೆಯರ ॥ ಬಟ್ಟಕುಚದ ಮಂದಗಮನೆಯ । ಕೊಟ್ಟುಗೂಡಿಸಿ ಬಾಲೆಯರ ॥೧॥ ಉಟ್ಟು ಚಲ್ಲಣದಿಂದಲಿ । ಬಿಗಿದಿರ್ದ ಪೊಲೆ। ಕಟ್ಟುಗಳಿಂದೆಸೆಯುತ ॥ ಬೊಟ್ಟು ಕಸ್ತೂರಿಯದು ಪಣೆಗೆ । ಇಟ್ಟು ಗಂಧವನು ಪೂಸುತ ॥೨॥ ಮನುಮಥ ಚತುರಂಗ ಬಲವು । ಬಂತೇನೀಗ । ಎನುವಂತೆ ಸಂದಣಿಸರಲು ॥ ಹನುಮಧ್ವಜವನೆ ಕಂಡರ್ಜು । ನನ ಮುಂಗಡೆಯಲ್ಲಿ ನಿಂದು ॥೩॥

ಭೈರವಿ, ಅಷ್ಟತಾಳ

ನರನೆ ನೀನಿರುವಿಯೇನು । ಮೂಲೋಕದಿ । ಧುರ ಧೀರನಹುದೆ ನೀನು ॥ ತುರಗವ ಬಿಡೆ ಮದನಾರಿಯೊಡನೆ ಕಾದ ತೆರನಲ್ಲ ತೆರಳು ನೀನು।೧। ನಾರಿ ನನ್ನಿರವ ಬಲ್ಲೆ । ಕರದ ಬಿಲ್ಲ । ನಾರಿನಿಂ ಶರ ಬಿಡೊಲ್ಲೆ ॥ ಸೇರಿ ಪರ್ಯಂಕವ ಕಾಮಧುರಕೊದಗಡೆ । ನೀರಸ ಸಹಸ ತೋರ್ದೆ ॥೨॥ ನಿನ್ನರಸಿ ಬಂದಿರ್ಪೆನು । ನಿಂದಿರ್ಪೆನು । ಇನ್ನೆಂತು ಸೈರಿಪೆನು॥ ನಿನ್ನರಸಿ ಬಂದಿರ್ಪೆನು ನಿಂದಿರ್ಪೆನು । ಇನ್ನೆಂತು ಸೈರಿಪೆನು ॥೩॥ ಪರಿಸುವದೆನ್ನ ಪಾರ್ಥ ।

Scanned by CamScanner

ವಿರಸವನುಳಿದು | ಬೆರೆದು ಬಾಳಿರು ಎನ್ನುತ || ಪರಿಪರಿ ಸುಖ ಸಂತೋಷವ
ಮಿಗೆ ತಾಳುತ | ಸುರಸೌಖ್ಯ ಮೀರಿ ನಾಥ ||೪|| ಸುರತ ಸುಖವನ್ನು
ನೀಡು | ಸರಸದಿ ಕೂಡು| ಬೆರೆತು ಸಂಗವನು ಮಾಡು || ಮರುಳುತನವನು
ಮೀರಿಸಿದೆಯಾದರೀಗಲೆ | ಶರದಿಂದ ನಿನಗೆ ಕೇಡು ||೫||

ನಾದನಾಮಕ್ರಿಯೆ, ಅಷ್ಟತಾಳ

ವಿಷಯವನೆಲ್ಲವ ಕೇಳಿಹೆ| ನಿಮ್ಮ | ವಿಷಯಾಸಕ್ತಿಯ ನಾ ತಿಳಿದಿಹೆ||
ವಿಷಯೋದ್ಭವ ಸ್ತ್ರೀಯರನೆ | ಕೂಡೆ | ನಶಿಸದಿರ್ದಪರೆ ಪೇಳ್ ಜಾಣೆ ||೧||
ದಿಟ್ಟೆ ತಾನೊಂದು ಬಾಣವನು | ಪೂಡಿ | ಬಿಟ್ಟು ತಾಡಿಸಿ ಪಾರ್ಥನನು ||
ಅಟ್ಟಹಾಸದಿ ನೋಯಿಸುತ್ತ | ದಿಟ್ಟೆ | ದಿಟ್ಟನಾತನ ಹಿಂಸಿಸುತ್ತ ||೨||
ಕಣೆವರ್ಷವನ್ನು ನಾ ಸುರಿವೆ | ನಿನ್ನ | ಹಣೆವರ್ಷವನ್ನು ನಾನಳಿವೆ || ಆಣೆ
ಯಾಗು ಅರ್ಜುನ ಬೇಗ | ಪೇಳು | ಅಣುಗು ತೋರುವದಾದರೀಗ ||೩||
ಅನುವರಕಿದಿರಿಸೆ ತೊಡೆವೆ | ಛಲವೆ | ವನಿತೆಯರಿಂಗಿದು ತರವೆ || ಕನಿಕರ
ತೋರೆನು ಎನುತ | ಸರ್ಪ್ಯೋ | ಹಸ ಅಸ್ತ್ರವನ್ನಾಗ ಬಿಡುತ ||೪|| ಮಂದ
ಸುಹಾಸದಿ ಖಂಡಿಸಿ | ಪ್ರಮದೆ | ಯೊಂದು ತೀಕ್ಷ್ಣಂಬಿನಿಂ ತಾಡಿಸಿ ||
ಮಂದಮತಿಯು ನೀನಹುದೆಂದು | ಮುಂದೆ | ಬಂದು ನಿಂದಿಸೆ ಭಾಪು
ಭಾಪೆಂದು ||೫|| ಕೋಪದಿಂ ಕಿಡಿಯನು ಉಗುಳುತ | ಜಿಷ್ಣು | ತಾಪದಿಂ
ಗಾಂಢೀವ ಪಿಡಿಯುತ || ಪೋಪ ಕಾಲವು ನಿನಗೆನ್ನುತ್ತ | ಇರಲು | ತಾ
ಪ್ರಯೋಗಿಸಬೇಕು ಎನ್ನುತ್ತ ||೬||

ಭಾಮಿನಿ

ಬೇಡ ಬೇಡ ಕಿರೀಟಿ ಸ್ತ್ರೀ ವಧೆ | ಕೂಡದೈ ಮಹದಸ್ತ್ರವನು ನೀ |
ಹೂಡುತಿಹೆಯಾ ವರುಷಸಾಸಿರ ಕಾದು ಫಲವಿಲ್ಲ || ಬೇಡ ಸತಿಯಾಗೊಲಿಸು
ಇವಳೊಡ | ಗೂಡೆ ನಿನಗನುಕೂಲ ಎಂದೊಡ | ನಾಡೆ ಅಂಬರದೊಂದು
ನುಡಿಯುದ ಪಾರ್ಥನಾಲಿಸುತ ||೧||

ಭೈರವಿ, ಅಷ್ಟತಾಳ

ಧನುವಿನಿಂ ಬಾಣವನು | ಇಳುಹಿ ಆಪ್ತ | ರನು ಕಂಡು ರಾಣೆಯನು||
ಒನಪಿನೊಳ್ ಬರಮಾಡಿ ಸಂತವಿಸುತ್ತವ | ಳನು ಒಡಂಬಡಿಸುತಲು ||೧||

Scanned by CamScanner

ನಾನರಸಬಂದೆನಲ್ಲೆ। ಮಾನಿನಿಮಣಿ ದು । ಮ್ಮಾನವತೋರ್ದೆಯಲೆ॥ ನಾನರಸ ಬಂದೆ ನಲ್ಲೆ । ಮಾನಿನಿಮಣಿದು । ಮಾನವ ತೋರ್ದೆಯಲ್ಲೆ ॥೨॥ ಎಂದು ಗಾಂಧರ್ವ ವಿವಾಹ । ವಾಗುತಲಂದ। ಇಂದಿಲ್ಲ ಪ್ರಣಯ ಮೋಹ ॥ ಮುಂದೆ ಯಾಗದಿ ಹರಿಯ ಕಂಡು ವಿಷವನು ಕಳೆದು । ಹೊಂದು ನೀನೆನ್ನನೆಂದು ॥೩॥

ಭಾಮಿನಿ

ಎನಲು ಸಂಬಿಕೆಯಿಂದ ಕುದುರೆಯ। ವಿನುತಳಾಗುತ ಚದುರೆಯೊಪ್ಪಿಸಿ। ವಿನುತಕೃಷ್ಣಗೆ ರತ್ನದಾಭರಣಗಳನರ್ಪಿಸಲು ॥ ಘನಮಹಿಮನಂಘ್ರಿಯನು ಸ್ಮರಿಸುತ । ಇನಿಯಳನು ಇಭಪುರಿಗೆ ಕಳುಹುತ । ಮನದಿ ತೋಷವ ತಳೆದು ತೆರಳಿದ ನರನು ಉತ್ಸಹದಿ ॥೧॥

ವಾರ್ಧಕ

ಮುಂದೆ ರಮಣೀಯವಾಗಿರ್ದ ಹಲದೇಶಗಳ। ಹಿಂದಿರಿಸಿ ಬಲು ವಿಚಿತ್ರದ ನಾಡ ನೋಡುತ್ತ । ಬಂದಿರಲು ಮಾಯಾವಿ ಮೂಕೋಟಿ ರಾಕ್ಷಸರಿರುವ ಭೀಷಣನ ರಾಜ್ಯದಿ ॥ ಎಂದಿನಂತಾಹಾರ ಅರಸುತಡವಿಯೊಳಿರೆ ಮ । ದಾಂಧ ಮೇಧೋಹೋತ ಗುರು ಕಂಡು ತಾತನನು । ಕೊಂದ ಭೀಮನ ತನ್ಮ ತುರಗವೊಡ ಬಂದಿಹನು ನರಮೇಧ ನಡೆಸೆನ್ನಲು ॥೧॥

ರೇಗುಪ್ತಿ, ಏಕತಾಳ

ಸಂತಸವೀದಿನ ಸೌಭಾಗ್ಯದ ದಿನ । ಬಂತಿದೊ ಬಾಗಿಲಿಗೆ ॥ ಕುಂತಿಯ ಕಂದರ ಕುದುರೆಯ ಕಟ್ಟುವೆ । ಸಂತತ ಸುಖವೆನಗೆ ॥ ಹಿಂದಕೆ ರಾವಣ ನರಮೇಧವ ತಾ । ಹೊಂದಿಸಿ ತ್ರಿಭುವನವ ॥ ನಿಂದನು ಗೆಲಿದತಿ ಯಶವನು ಪಡೆದನು । ಹೊಂದಿದ ನಂದನವ ॥೧॥ ನರಮೇಧವ ನಾ ವಿರಚಿಪೆ ವಿಭವದಿ। ನರನಿವನೊದಗಿಹನು ॥ ಸುರ ಅಸುರಾದ್ಯರೊಳೆಣೆಯಿಲ್ಲೆನಿಸುತ ಮೆರೆಯುವೆನ್ನೈ ನಾನು ॥೩॥ ದಾನವ ದಂಪತಿ ಸಾವಿರ ಸಂಖ್ಯೆಯ । ದಾನದಿ ದಣಿಸುವೆನು॥ ಮಾನವ ಮಾಂಸದ ಭೋಜನವೀಯುತ ಮಾನದಿ ತಣಿಸುವೆನು ॥೪॥ ತಡವೇತಕೆ ಗಡ ಪಡೆಯೊಡಗೂಡುತ । ತಡೆವೆನು ತಾಡಿಸುತ ॥ ನಡೆವೆನು ಪೊಡವಿಯ ನಡುಗಿಸಿ ಉಡುಗಿಸಿ । ಪಿಡಿವೆನು ಪೀಡಿಸುತ ॥೫॥ ಉರಿಹೊಗೆ ಮಿಂಚನು ಸಿಡಿಲನು ಮುಸುಗುವೆ। ಬರಿ ಕತ್ತಲೆ ಧೂಳಿ॥ ಚರಿಸುತ ನರಿ ಹುಲಿ ಭೂತದ ರೂಪದಿ । ಬರಿಸುತ್ತಲೆ ಗೋಳ ॥೬॥

Scanned by CamScanner

ಭಾಮಿನಿ

ಎನುತ ಭೀಷಣ ಕಾಲಭೈರವ । ನೆಸುವ ತೆರದಾ ದೈತ್ಯ ವೃಂದವ। ನಸುಗೊಳಿಸಿ ಮುತ್ತಿದನು ನರನಾ ಸೈನ್ಯಸಾಗರವ ॥ ಧನುವಿನಿಂ ಶರಮಳೆಯ ಸುರಿಸುತ । ರಣದಿ ಹಾವಳಿ ಎಬ್ಬಿಸುತ ಪಾ । ರ್ಥನಲಿ ಬಾಯ್ಬಿರಿದಬ್ಬರಿಸು ತಿಂತೆಂದನವನಾಗ ॥೧॥

ಕಾಂಬೋಧಿ, ಅಷ್ಟತಾಳ

ಸಿಕ್ಕಿದೆಯೆಲೊ ಎನ್ನ ನೆಲೆಗೆ । ನಿನ್ನ । ಸೊಕ್ಕಡಗಿಪೆ ಬಿದ್ದೆ ಬಲೆಗೆ ॥ ಮುಕ್ಕಿಸುವೆನು ರಣಕಣದಿಹ ಮಣ್ಣ । ಲೆಕ್ಕಿಸುವೆನೆ ಕಕ್ಕಿಸುವೆ ರಕ್ತ ಮುಕ್ಕನೆ । ೧॥ ಮೂರು ಕೋಟಿಯು ಸೇನೆ ಸೇರಿ । ಭಾರಿ । ಭೂರಿ ನರಮೇಧ ತಯಾರಿ ॥ ನಾ ರಚಿಸಿಹೆ ಯಜ್ಞಮಂಟಪವನಿತರಲಿ । ಮೀರಿ ನಮ್ಮ ಮೇಧೋಹೋತ ಪುರೋಹಿತ ॥೨॥ ತಾತನ ಕೊಂದಿಹ ಹಗೆಯ । ಇಂದು। ಘಾತಿಸಿ ತೀರ್ಚುವೆ ಪಗೆಯ ॥ ಈತನ ಪಿಡಿದು ಯಾಗದ ಪಶು ಮಾಳ್ಪೆನೆಂ । ದಾತ ಗುಡುಗುತ ಪಾರ್ಥ ರಥವಡಹಾಯ್ದಿರೆ ॥೩॥

ಕೇದಾರಗೌಳ, ಝಂಪೆ

ಪೂಡುತಲು ರಕ್ಷೋಘ್ನವ । ಅರ್ಜುನ ವಿ । ಭಾಡಿಸಲು ಬಲದಾಘವ॥ ನೋಡುತಿರೆ ದೆಸೆದೆಸೆಯೊಳು । ಅಸುರದಳ । ಓಡುತಿರೆ ನಡೆಗುಂದಲು ॥೧॥ ನಸುನಗುತ ದೈತ್ಯನನ್ನು । ಹೊಸೆದಿರಲು। ಬಸವಳಿವ ತೆರದೊಳವನು ॥ ಅಸು ಭಯದಿ ಕಂಪಿಸುತ್ತ । ಪುಸಳುತಲಿ । ಮುಸೆದು ತಾ ಯೋಚಿಸುತ್ತ ॥೨॥ ಜೇಯುತಲಿ ರಚಿಸಿಮೋಸ । ತಳೆದು ಖಳ । ಮಾಯದಲಿ ಮುನಿಯ ವೇಷ ॥ ಹೇಯದೀ ಕೃತ್ಯ ಸಲದು । ಎಂದನವ । ನ್ಯಾಯ ಸದ್ಧರ್ಮ ಪಿರಿದು ॥೩॥ ಅನೃತದ ಕೃತಿಯನರಿದು । ಫಲ್ಗುಣನು ಉನ್ನತದ ಬಾಣ ಪಿಡಿದು॥ ಬನ್ನವನು ಪಡಿಸಿ ತಡೆದು । ಮುನಿದೆದ್ದು । ಬೆನ್ನಟ್ಟುತವನ ಬಡಿದು ॥೪॥

ಕಂದ

ಉಳಿದರನೆಲ್ಲರ ಸದೆಯುತ। ದಳ ಸಹಿತಲಪಹರಿಸಿ ತರತರದ ವಸ್ತ್ರಗಳಂ।
ಬಳಿಕಾದ್ವರ ಹಯದೊಡನವ । ತಳೆದಾನಂದವ ತೆರಳಿದ ಮಣಿಪುರದೆಡೆಗಂ ॥೧॥

Scanned by CamScanner

ವಾರ್ಧಕ

ಮಣಿನಗರ ಸೊಬಗನೀಕ್ಷಿಸಿ ಧನಂಜಯು ನಗುತಿ I ದನು ಪಾಲಿಸುವ ಧೊರೆಯದಾರು ನಮ್ಮಯ ವಾಜಿ I ಯನು ಕಟ್ಟಬಹುದೆ ಹೇಗೆನುತ ಹಂಸ ಧ್ವಜನೊಳಾತ ಕೇಳುತ್ತಲಿರಲು II ಅನಿತರಲಿ ಗೃಧ್ರವೊಂದವನ ಕಿರೀಟಾಗ್ರ I ವನು ಬಳಸಿ ಕಾಲೂರಿ ನಿಂದಿರಲು ಕಾಲಗತಿ I ಘನ ಕೇಡ ತೋರುತಿಹೆ ಎಂದೆಲ್ಲರುಂ ಮರುಗೆ ಅತ್ತ ಮಣಿಪುರದ ರಾಯ II೧II

ಭಾಮಿನಿ

ಪಳಕುಗಳ ನೆಲೆಕಟ್ಟು ನೀಲದ I ಪೊಳೆವ ಗೋಡೆಯು ವಜ್ರ ಕಂಭ ಹI ವಳದ ಪುತ್ಥಳಿಯಿಂದ ಎಸೆವಾಸ್ಥಾನ ಮಂಟಪದಿ II ಕುಳಿತಿರಲು ಚಾರಕರು ಬಂದೆರ I ಗಲವರನು ಪ್ರಶ್ನಿಸಲು ಕರಮುಗಿ I ದಿಳೆಯಧಿಪಗವರಾಗ ಭಯ ಭಕುತಿಯಲಿ ಬೆಸಸಿದರು II೧II

ಸವಾಯಿ, ಏಕತಾಳ

ಅವನಿಪ ಲಾಲಿಸು ಇತ್ತಲದೊಂದು ಹI ಯವು ಸುಗ್ಗಿದೆ ಈ ಪಟ್ಟಣದಿII ಅವನಕೆ ಬಂದಿಹ ಸೈನ್ಯವು ಪಾಳ I ಯವ ಬಿಟ್ಟಿದೆ ಊರಿನ ಹಿಂದೆ II೧II ದಿವ್ಯ ಮುತ್ತು ಮಾಲೆಗಳಿಂದಲಿ ಅದು I ನವ್ಯ ಸುವರ್ಣಾಭರಣಗಳಿಂ II ಭವ್ಯ ಗಂಧಮಾಲೆಯೊಳು ಅಲಂಕರಿ I ಸಿರ್ಪ ಯಜ್ಞಾಶ್ವವು ತಾ ನಿಜದಿಂ II೨II ಹಣೆಯುದೆ ಹಾವಳಿಗೈದಿರೆ ನಮ್ಮಪ I ವನದಲಿ ಪಿಡಿಯಲು ಪೋಗಿರಲು II ಪಣೆಯಲಿ ಕಟ್ಟಿದ ಪಟ್ಟಿಯೊಳಿಹ ಬರ I ವಣಿಗೆಯು ಕಂಡರುಹಿದೆವೆನಲು II೩II

ಶಂಕರಾಭರಣ, ಏಕತಾಳ

ತುರಗ ತರಿಸಿ ಪಣೆಯ ಪಟ್ಟಿ I ಬರಹವೋದಿ ಭಟರ ಕಳುಹಿ I ಇರಿಸೆ ವಾಜಿಶಾಲೆಯೊಳಗೆ I ಒರೆದನಾಗಲೆ II೧II ಯುದ್ಧಗೈಯೆ ಸಕಲ ಸೈನ್ಯ I ಸಿದ್ಧ ನಾಗರುಹಿ ಮಂತ್ರಿ ಸುI ಬುದ್ಧಿಯೊಡನೆ ಆಲೋಚಿಸು I ತಿದ್ದನಾಕ್ಷಣI೨I ನರನ ವೃತ್ತಾಂತವನು ಕೇಳಿ I ಬರಲು ಚಿತ್ರಾಂಗದೆಯು ಮುದದಿ I ಎರಗಿ ಬಭ್ರುವಾಹನನು ಎ I ದುರುಗೊಳಲಾಗ II೩II

ಬಿಲಹರಿ, ರೂಪಕತಾಳ

ಮಗನೆ ಲೇಸನು ಮಾಡ್ದೆ | ಬಿಗಿದೆಯೊ ವಾಜಿಯ | ಬಗೆಯದೆನ್ನೊಳು ಈಗ | ಪೊಗದೋರಲೆಂತು || ಅಗಲಿ ಕಾಂತನ ವಿರಹ | ದುಗುಡದಿಂದಿರೆ | ನಗರಕ್ಕೈದಲು ಹೀಗೆ | ಮಿಗುವರಿಯುವದೆ ||೧|| ಕೌಂತೇಯನಾಗಮನ | ಆತನ ಪುತ್ರನಾ | ದಂಥ ನಿನಗೂ ಅಹಿತ | ವೆಂತಾಯಿತೆ || ಅಂತು ಆತನ ಕುದುರೆ | ಯೆಂತು ಕಟ್ಟಿದೆ | ಯುಂತೆ ನಿನ್ನುದ್ಭವವು | ಎಂಥಾ ದ್ರೋಹವು ||೨|| ಹಿಂದೆ ತೀರ್ಥಕ್ಷೇತ್ರ| ಕೆಂದು ಆ ಪಾರ್ಥ | ಬಂದಿರ್ದನವನ ನಾ | ನಂದದಿ ವರಿಸೆ || ಕಂದ ನಿನ್ನನು ಪಡೆದೆ | ನಂದು ಸಲಹಿದ | ಛಂದದುಲೂಪಿ ಎಲ್ಲ | ತಂದೆಗೊಪ್ಪಿಸು ||೩|| ಎಂದೆಂದ ಮಾತಿಗೆ | ನೊಂದಿಹ ಮಾತೆಗೆ | ಕಂದನೊಡನೆ ಪೇಳ್ದ | ಕಂದುತ ಕೇಳ್ದ || ತಂದೆಯದೆಂದೆಂಬ | ದಿಂದು ತಿಳಿಯದೆ | ಮಂದಮತಿಯಂದದಿ | ದಂದುಗ ತಾಳ್ದೆ ||೪|| ವೀರ ಕ್ಷತ್ರಿಯ ನೀತಿ | ದೋರಿದೆ ಚಿತ್ತ | ಬಾರದಿರ್ದೊಡೆ ಪೇಳು | ಸೈರಣೆ ತಾಳು || ಹಾರಿ ಅರೆಕ್ಷಣದಲ್ಲಿ | ಸಾರಿ ತಾತನ | ಕೋರಿ ಸುವಸ್ತುವ | ಮೀರಿ ಅರ್ಪಿಸೆ ||೫|| ಎನ್ನುತಲವಳನ್ನು | ಮನ್ನಿಸಿ ಕಳುಹುತ | ವಿನ್ಯಾಸ ಕ್ರಮ ವಿಷಯ | ವನ್ನ ಯೋಚಿಸುತ || ಸನ್ನುತ ಪರಿವಾರ | ದುನ್ನತ ಹಯವ | ತನ್ನಯ್ಯಗೆ ವಸ್ತು | ಹೊನ್ನು ತೆಗೆಸಿದ ||೬||

ಸಾವೇರಿ, ಅಷ್ಟತಾಳ

ಬಂದನಾ ಬಭ್ರುವಾಹನ | ಸಂಭ್ರಮದಿಂದೈ| ತಂದನಾ ಬಭ್ರುವಾಹನ|ಪ| ಘನ ವಾದ್ಯ ರಭಸದಿಂದ| ಸುಬುದ್ಧಿ ಮಂತ್ರಿ| ಜನ ಪ್ರಮುಖರನೊಳಗೊಂಡ|| ಎಣೆಯಿರದ ಚತುರಂಗ ಬಲದಿ ಸೇನಾನಿಯ | ರನು ಕಲಶ ಕನ್ನಡಿ | ವನಿತೆಯರನು ||೧|| ಪರಿಜನ ಪುರಜನ ಭೂ| ಸುರ ಸಹಿತಲಾ | ನರನಿದ್ದೆಡೆಗೆ ಬಂದು || ಹರುಷ ಪುಲಕಾಂಕಿತನಾಗಿರಲು ಪಾರ್ಥ ಚರಣಗಳಲಿ ರತ್ನ | ಸುರಿದು ತಾನು ||೨|| ಮೆಲ್ಲನೆ ತನ್ನ ಮೌಳಿ | ಆತನ ಪಾದ | ದಲ್ಲಿಟ್ಟು ನಯವ ತಾಳಿ || ಸಲ್ಲಿಸಿ ಶಿರಸಾಷ್ಟಾಂಗ ಪ್ರಣಾಮವ | ನಿಲ್ಲಲು ಕರಮುಗಿದು| ಅಲ್ಲಿ ಭಯದಲ್ಲಿ||೩|| ಕಾಣಿಕೆ ಮಂತ್ರಿವರ್ಯರು | ಒಪ್ಪಿಸೆ ನರನಿ | ದೇನು ನೀನಾರೆನಲು || ಕ್ಷೋಣೀಶ ನೀ ಎನ್ನ ತಾತ ನಾ ಮಗನಯ್ಯ | ಮಾಣದೆ ಕ್ಷಮಿಸೆನ್ನ| ತ್ರಾಣಿ ತ್ರಾಹಿ||೪|| ಮಾತೆ ಚಿತ್ರಾಂಗದೆಯು | ಉಲೂಪಿಯು|

Scanned by CamScanner

ಈತನ ಸಲಹಿದವಳು ।। ತೀರ್ಥಯಾತ್ರೆಗೆ ನೀನು ಬರೆ ವರಿಸಿದರವರು । ತೀರ್ಥ ರೂಪ ಅಪ। ರಾಧ ಕ್ಷಮಿಸು ।।೫।। ಅರಿಯದೆ ಯಜ್ಞಾಶ್ವವ । ತಪ್ಪಿದೆ ಕಟ್ಟಿ। ತರಳನಾದರಿಸೆನುವ ।। ಚರಣಂಗಳೊಳು ಬಿದ್ದು ಬೇಡುತಿರಡಿಗಡಿಗೆ । ಉರಗೇಂದ್ರ ಮೊಮ್ಮನಾ । ದರಿಸದಾಗ ।।೬।।

ಘಂಟಾರವ ಮಟ್ಟೆತಾಳ

ಉರಿದು ಅರ್ಜುನ । ನೊದೆದು ಪುತ್ರನ । ಧುರಕೆ ಬೆದರುತ ಬಂದೆ ಎನ್ನುತ ।।೧।। ಕುದುರೆ ಕಟ್ಟಿದೆ । ಎಂದು ಎರಗಿದೆ । ಮದವ ತೋರಿದೆ । ಬಂದು ತಪ್ಪಿದೆ ।।೨।। ಎಂಥ ಕ್ಷತ್ರಿಯ । ನೆಂದು ಕಾಣೆಯ । ಪಂಥವೆತ್ತಣ । ಪಥವು ಇತ್ತಣ ।।೩।। ಎನ್ನ ಆತ್ಮಜ । ಚಕ್ರವ್ಯೂಹವ । ಭಿನ್ನಗೊಳಿಸಿದ। ನಳಿದು ಬಾಳಿದ ।।೪।। ನರಿಯು ಜನಿಪುದೆ । ಸಿಂಹದುದರದೆ । ತೆರಳ। ಹೇಡಿಯೆ । ಮುಖವ ತೋರದೆ ।।೫।। ವೀರ ಮಾತೆಯೆ। ನಿನ್ನ ತಾಯಿಯು ಆರ ಕುವರ ಪೈ । ಶ್ಯರಿಗೆ ಉದಿಸಿದೆ ।।೬।।

ಸೌರಾಷ್ಟ್ರ, ತ್ರಿವುಡೆತಾಳ

ಒದ್ದು ಭಂಗಿಸೆ ಬಭ್ರುವಾಹನ । ನೆದ್ದು ಆರ್ಭಟಿಸುತ್ತ ಘರ್ಜಿಸಿ । ಬುದ್ಧಿಗಲಿಸುವೆ ಪಾರ್ಥಗೆನ್ನುತ । ಕ್ರುದ್ಧನಾಗಿ ।।೧।। ಎಲವೊ ಜನನಿಯು ಜರೆದು ಎನ್ನನು । ಪಲವು ಬಗೆಯಲಿ ಮೂದಲಿಸಿದಾ । ತಲೆಯನಿಳುಹು ವೆನೆಂದು ಶಪಥವ । ತಳೆದು ತೆರಳಿ ।।೨।।

ಸುರುಟಿ, ಆದಿತಾಳ

ಅನುವರಕನುವಾದ । ಫಲುಗುಣಿ । ಜನಕನಿಗೆದುರಾದ ।।ಪ।। ಮತ್ತವ ನತಿ ಬಲವು । ಸೇರಿತು । ಒತ್ತರಿಸಲು ನೆಲವು ।। ಮುತ್ತಿತು ಕೆಂಧೂಳು । ಮುಚ್ಚಿತು । ಛತ್ರ, ಚಾಮರ ಪಟವು ।।೧।। ರತ್ನಖಚಿತ ರಥವ । ನೇರುತ । ಮೃತ್ಯುವು ತಾನೆನುತ ।। ಬಿತ್ತಿದ ಶರವರ್ಷ । ಉಳಿಯುವ । ಯತ್ನವ ಮಾಡೆನುತ ।।೨।। ಬರುತಿಹ ಬಾಣಗಳ । ಪಾರ್ಥನ । ತರಿಯುತ ಅಸ್ತ್ರಗಳ।। ಭರದಲಿ ಬಿಡುತಲಿರೆ । ಬಾನದು । ಬಿರಿವಂತೆಸೆಯುತಿರೆ ।।೩।। ಬಳಲಿಸಿ ಸೇನೆಗಳ । ಬೆದರಿಸಿ । ಇಳೆಗೊರಗಿಸುತವರ ।। ಅಳಿಸಿದ ಕರ್ಣಜನ । ನರ ಬಸ । ವಳಿಯಲು ಪಳಿದವನ ।।೪।।

Scanned by CamScanner

ಆನಂದಭೈರವಿ, ಏಕತಾಳ

ವೈರಿಪುತ್ರನಳಿದರೇನು | ತೋರು ನಿನ್ನ ಸಾಹಸವನು | ವೀರನೆ | ಶೂರ| ಧೀರನೆ ||೧|| ಫಡಫಡಿಲವ್ರೊ ವಾಜಿಯನ್ನು| ತಡೆದೆಯೇಕೆ ನಿನ್ನನಿನ್ನು| ಬಿಡುವೆನೆ | ಜೀವ | ದಿಡುವೆನೆ |೨| ತಾಳು ಶೌರ್ಯ ತೋರಿಸುವೆನು | ತೋಳ ತೀಟೆ ತೀರಿಸುವೆನು | ಅಳಲದೆ | ನಿಲ್ಲು | ಅಳುಕದೆ ||೩||

ನಾದನಾಮಕ್ರಿಯೆ, ಅಷ್ಟತಾಳ

ವಾರುವ ಬೇಗ ತಂದೊಪ್ಪಿಸು | ಹರಣ ಹಾರುವ ಮುನ್ನ ವಿವೇಚಿಸು|| ಸಾರಿ ಪೇಳುವೆ ಮಿಕ್ಕು ದುಡುಕದೆ | ವೃಥಾ| ಮಾರಿಗೌತಣವಕ್ಕು ತಡೆಯದೆ ||೧|| ಅರಿ ಕುದುರೆಯು ಬಿಸಿಲ್ಗುದುರೆಯು | ನಿನ್ನ | ಶರವರ್ಷ ಮಂಜಿನ ಮಳೆಯು || ಅರಿಯೆ ಪಾರ್ಥ ವ್ಯರ್ಥ ಅಳಲು | ಎನ್ನ | ಅರಿಯೆಲ್ಲಬಲ್ಲೊಡೆ ಉರಿಯ ನೆಳಲು |೨| ಮಾತಿನ ಮಲ್ಲ ನೀನಹುದು | ಮಾತ್ರ | ದೀತನ ಗೆಲ್ಲಲೇನಹುದು || ಪಾರ್ಥನ ಪೆಸರೊಂದೆ ಬಲ್ಲೆ | ಸತ್ವ | ಕ್ಷಾತ್ರ ಶಕ್ತಿಯ ಮೆರೆಸೆ ನಿಲ್ಲೆ ||೩|| ನೇಸರು ಬರೆ ತೋರಲೇಕೆ | ಉಲರು | ವಾಸನೆ ಇರೆ ಸಾರಬೇಕೆ || ವಾಸುಕಿ ಶಯನನ ಕೃಪೆಯೊಳೆ | ಮೆರೆದೆ | ಈಸು ದಿನವೈಸೆ ನೀ ಮರುಳೆ ||೪||

ಮಾರವಿ, ಮಟ್ಟೆತಾಳ

ಬಾರೊ ಮುಂದಕೆ | ಬೀರ | ಮೂರು ಲೋಕಕೆ || ಚಾರು ತುರಗ ಬಿಡಿಸಿಕೊಳಲು | ಹೋರು ಹೇವಕೆ ||೧|| ಪಥವ ತೋರುವೆ | ಶುಷ್ಕ | ಖತಿಯನಿಳಿಸುವೆ || ಕ್ಷಿತಿಯೊಳಿಂದು ನಿನ್ನ ಪೆಸರ | ಹತವಗೊಳಿಸುವೆ ||೨|| ಸುಡು ಗಾಂಡೀವವ | ಬಿಡದೆ | ಕೆಡೆವೆ ಬಾಣವ|| ಪಿಡಿ ಪಾಶುಪತಾಸ್ತ್ರವನ್ನು ತಡವವೇಕೆಲ ||೩|| ಕುದಿದು ರಥವನು | ಸರಿಸಿ | ಸೆದೆದು ಧ್ವಜವನು || ವಧಿಸಿ ಸಾರಥಿಯನು ನವೆಸು | ತಡಪಿ ನರನನು ||೪||

ಅಷ್ಟಪದಿ ಮಾರವಿ, ಏಕತಾಳ

ಕೀರುತ ರಣದವ | ಕಾರುತ ಕೋಪವ | ಊರುತ ಖಡ್ಗವ | ಬೀರುತ ಬಾಣವ | ಹೋರಿದ ಆಹವ | ತೂರಿದ ಸೈನ್ಯವ | ಮೀರಿಸಿ ಧೈರ್ಯವ |

Scanned by CamScanner

ವೀರನಾಗ ||೧|| ಕೊಳಗುಳ ಕಾವೇ | ರಳಿಯುತ ಪಟುಭಟ | ರಿಳೆಯೊಳು ಬೀಳಲು | ಬಳಲಿದ ಪಾರ್ಥಗೆ | ಅಳಲದೆ ದೇವನ | ತಳುವದೆ ಸ್ಮರಿಸುವ | ದೊಳಿತೆನ್ನುತಲವ | ಪಳಿದಿರೆ ನರ ಹರ | ವಳಿಸಲಾಗ |೨|

ಭಾಮಿನಿ

ಧರಣಿಪಾಲಾ ಭೀಷ್ಮಾಚಾರ್ಯನ | ಮರಣ ಕಾರಣನಾದ ಪಾರ್ಥನ | ಶಿರವು ಬೀಳಲಿ ಎಂದ ಜಾಹ್ನವಿ ಶಾಪಬಲದಿಂದ || ನರನ ಕರ ಸೋಲುವಡಿ ಫಲುಗುಣಿ! ತರತರದಿ ಸೆಣಸಿದನು ಕಾಯವು| ತರಹಿಪ ರೀತಿಯೊಳು ಘಾಯವ ಗೊಳಿಸಿ ಕೈಮೀರಿ ||೧||

ನೀಲಾಂಬರಿ, ರೂಪಕತಾಳ

ಬಂದ ಶಾಪದಿ | ಕುಂದಿ ಬುದ್ಧಿಯು | ಒಂದು ಬಾಣಕಿ | ನ್ನೊಂದು ತೊಡುತಿರೆ || ಕಂದನದ ಸುಖ | ದಿಂದಲೆಮರಿಸೆ | ಅರ್ಧ ಚಂದ್ರಾ | ಸ್ತ್ರವ ಪ್ರಯೋಗಿಸೆ ||೧|| ಒಡನೆ ವೇಗದಿ | ಬಡಿದು ಬೇಗುದಿ| ಪಡಿಸಿ ಪಾರ್ಥನ| ಕಡಿಯೆ ಶಿರವನ || ಪಡೆದು ವಿಜಯವ | ನುಡುಹಿ ವಿಜಯನ | ಪಡೆಯ ಸಹಿತಲಿ | ಬಭ್ರುವಾಹನ ||೨||

ಭಾಮಿನಿ

ನಡೆದು ಸಂಭ್ರಮದಿಂದ ತಾಯಿಯ | ಅಡಿಗೆ ನುಡಿದನು ನಡೆದ ಬಗೆ ಯನು | ಒಡನೆ ಚಿತ್ರಾಂಗದೆಯು ಸಿಡಿಲೆರಗಿದೊಲು ಕುಸಿಯುತಲಿ|| ಬಡಿದು ಪಣೆಯನು ದುಃಖಭಾರದಿ | ನಡುಗುತಿಹ ದನಿಯಲ್ಲಿ ತನುಜನೆ | ಕೆಡಕನೀಪರಿ ಮಾಡ್ದೆ ಹಡೆದುದು ವ್ಯರ್ಥವಾಯ್ತೆನುತ ||೧||

ವಾರ್ಧಕ

ಒಳಿತು ಕಾಯಕ ಸಿಡಿದೆಯೊಳಿತು ಕಾರ್ಯವಗೈದೆ | ಬಳಿದೆ ಬಣ್ಣವ ಜಗವೆ ತಳೆದೆ ಖ್ಯಾತಿಯ ನಿಜದೆ | ಮುಳಿದು ಪಿತೃಹತ್ಯಕೆನುತೆಳಸುವರಿ ಮುಂದೇನು | ಅಕಟ ಬರಿದಾಯ್ತು ಬಾಳು|| ಅಳಿದನೇ ಎನ್ನಿನಿಯ ಉಳಿವನೇ ಈ ಸಿರಿಯು | ಪಳಿದಿನ್ನು ಫಲವೇನು ಕಳೆದೆ ಮಾಂಗಲ್ಯವನು | ಸೆಳೆದೆಯೋ ಕಿವಿಯೋಲೆ ಇಳಿಸಿದೆಯ ಭಾರವಲೆ ಎನುತ ಧಾವಿಸುತ ಕಣಕೆ ||೧||

Scanned by CamScanner

ಯರಕಲಕಾಂಭೋಜ, ಅಷ್ಟತಾಳ

ನೀರ ನೀಕರಿಸಿ । ಸಾರ್ದಿಯ ಎನ್ನ । ಮೀರಿ ಮೂದಲಿಸಿ ॥ ನೀರಸೀ
ನೀರೆಯು ಮರೆದು ತೊರೆದು ಕಾಯ । ಸಾರುವದಿದು ಸರಿಯೆ । ಈ ಪರಿಯೆ
॥ಪ॥ ನಿನ್ನ ಸಂಗವನು । ಕಾಯುತ್ತಲಿರೆ । ಎನ್ನ ಅಂಗವನು ॥ ಬನ್ನಕೆ
ಮೂಡಿದೆ ಬರಿದೆ ವಲ್ಲಭನಿಂದೆ । ನನ್ನಿಯದೋರೀಗಲು । ಎನ್ನುತಲು ॥ ನೀರ
॥೧॥ ಪುತ್ರ ಪ್ರತಿಜ್ಞೆಯ । ನಿಮಿತ್ತದಿ । ಕುತ್ತ ಪೊಂದಿದೆಯ ॥ ಇತ್ತ
ಭೂಮಿಯೊಳಿನ್ನದೆತ್ತಣ ಗತಿ ಎನ್ನ । ದುತ್ತರಿಸೆನ್ನುತಲು । ಪೊರಳುತಲು ॥ನೀರ॥

ಮಧುಮಾಧವಿ, ಏಕತಾಳ

ತಾಯೆ ಗೌರವಮೀಯೆ ಕಾಣಿಕೆ ನೀಡೆ । ನೋಯಿಸಬಹುದೇನು ಪಂಥದಿ
ತಡೆದೆ ॥ಪ॥ ಬೇಯುತಲಿಹುದೆನ್ನ ಮನವು ವಿಪ್ಲವದಿ । ಕಾಯ ಕಳವಳಿಸು
ತ್ತಲಿದೆ ಕಷ್ಟಭರದಿ ॥ ಆಯಿತಾಯಿತು ಇನ್ನು ಪೇಳ್ವದೇನಹುದು । ಹೇಯ
ಕೃತ್ಯವ ಗೆಯ್ದು ದೋಷ ಬಂದಿಹುದು ॥ತಾಯೆ॥೧॥ ಪಾಪಿಯಾದೆನು ಪಿತೃ
ಹತ್ಯವ ಮಾಡಿ । ತಾಪ ಸೈರಿಸೆ ನಿನ್ನ ನೋವನ್ನು ನೋಡಿ ॥ ಈಪರಿ
ಸೈರಿಪದೆಂತು ಇನ್ನುಳಿದು । ಪಾಪ ಪ್ರಾಯಶ್ಚಿತ್ತ ಮಾಳ್ಪ ನಾನಳಿದು ॥ತಾಯೆ
॥೨॥ ಚಿಂತೆಯ ಪರಿವೆನು ಚಿತೆಯಂ ಪುಗುವೆನು । ಇಂತೆನ್ನುತಿರೆ ಬಭ್ರುವಾಹನ
ತಾನು ॥ ಕಂತಿರೆ ಚಿತ್ರಾಂಗದೆಯು ಗೋಳಿನಲಿ । ಮುಂತೆನ್ನ ಕತ್ತರಿಸೆನ್ನೆ
ಪಾರ್ಥಿಯಲಿ ॥ತಾಯೆ॥೩॥

ರೇಗುಪ್ತಿ, ಅಷ್ಟತಾಳ

ಭೂಪತಿಯಾಲಿಸು ಈಪರಿ ಶೋಕದಿ । ತಪಿಸುತ್ತಿರಲೆಲ್ಲ ॥ ಶ್ರೀಪತಿ
ನರನಪವೆಸೆಯನು ತಪ್ಪಿಸೆ । ಕ್ಷಿಪ್ರದಿ ಧಾವಿಸಿದ ।೧। ತಡವಿದನಾಗ ಮಾತಾಡಿದ
ನೋಡಿದ । ತಡೆದವರಾರೆಂದ ॥ ಒಡನುಡಿ ಮೇಘವ ನಡೆಸಲು ಬಿಡದಲೆ
ಕೆಡಹಿದರಾರೆಂದ ॥೨॥

ಭಾಮಿನಿ

ಕಳವಳವ ನಟಿಸುತಲಿ ದೇವನು । ಅಳಲಿನಿಂ ಮನುಜನೊಲು ಮರುಗುತ ।
ಕೊಳಗುಳದ ವೃತ್ತಾಂತ ಕೇಳುತ ಬಭ್ರುವಾಹನನ ॥ ಕಳುಹಿ ಪಾತಾಳದಲಿ
ನೆಲಸಿಹ । ಮೆಳೆವ ಸಂಜೀವಕದ ಮಣಿಯನು । ತಳುವದಲೆ ತರಿಸುತಲಿ
ಪಾರ್ಥಗೆ ಕರ್ಣಜಗೆ ಸೋಂಕಿ ॥೧॥

Scanned by CamScanner

ವಾರ್ಧಕ

ಚಿನುಮಯನು ಪರಸಿರಲು ಚೇತರಿಸಿ ಉಭಯತರು । ಘನವಾದ ದೀರ್ಘ ನಿದ್ರೆಯೊಳಿರ್ದ ಪರಿಯಿಂದ । ಲಸಿತರಲಿ ಕಣ್ದೆರೆದು ವ್ರೈ ಮುರಿದು ಸರ್ವರನು ಈಕ್ಷಿಸಿದರರ್ತಿಯಿಂದ ॥ ತನುವ ಬಾಗುತ ಕೇಶವನ ಪದಗಳಲಿ ಪೊರಳಿ । ತನುಜನನು ತಕ್ಕೈಸಿ ಪಾರ್ಥ ಭಾಪುರೆ ಎನುತ । ನೆನೆದು ಚಿತ್ರಾಂಗದೆಯುಲೂಪಿಯನು ಸಂತೈಸಿ ನಡೆದ ನಗರಕೆ ನಲ್ಮೆಯಿಂದ ॥೧॥

ನೀಲಾಂಬರಿ, ಝಂಪೆತಾಳ

ಹರಿಯಿಂದ ಜಾಹ್ನವಿಯ । ಶಾಪದಾ ಸಂಗತಿಯ । ಅರಿದು ಮಣಿಪುರವಂದು। ಬೆರಗಾಗಿ ನಿಂದು ॥೧॥ ರಾಜಿಸಿತು ಸಂಭ್ರಮದೆ। ಬಭ್ರುವಾಹನ ಬಿನದೆ । ರಾಜ್ಯವನು ಪಾರ್ಥನಿಗೆ । ಒಪ್ಪಿಸಿದನಿರದೆ ॥೨॥ ತುರಗವನು ನಡೆಯಿಸುತ । ನರಹರಿಯು ಕೂಡುತ್ತ । ಪೊರಟ ರಕ್ಷೆಗೆ ಎನುತ । ಪಿರಿದು ಪಡೆ ಸಹಿತ ॥೩॥

ಭಾಮಿನಿ

ಭರದೆ ಲಕ್ಷ್ಮೀರಮಣ ನರನೊಡ । ನಿರದೆ ದ್ವಿಜ ರೂಪದಲಿ ಕಾಣಿಸಿ । ಧರಣಿಯರಸ ಮಯೂರಧ್ವಜನಲಿ ದೇಹದರ್ಧವನು ॥ ಕರುಣಿಸೆನೆ ಬಹು ಭಕ್ತಿಭಾವದಿ । ಅರಿದು ಈಯುತ ತೋಷದಿಂದಲಿ । ತುರಗ ತನ್ನದನಿತ್ತು ಯಜ್ಞವ ನಿಲಿಸಿ ಮೆಚ್ಚಿಸಿದ ॥೧॥

ವಾರ್ಧಕ

ಹರಿಯು ಬೆಂಗಾವಲಿನೊಳಿರುವ ಕುದುರೆಗಳೆರಡು । ಬರಲು ಸಾರಸ್ವತ ಪುರದಿ ವೀರವರ್ಮ ಥೊರೆ । ಯಿರಲು ಹಯಗಳ ಪಿಡಿದು ಕದನಕೆದುರಾಗಿರಲು ಯಮನಿಷ್ಟದಂತೆ ಜಯಿಸಿ ॥ ಸುರಮುನಿಯ ಮುಖದಿಂದ ಚಂದ್ರಹಾಸನ ಕಥೆಯ । ಹರುಷದಿಂ ಕೇಳಿಯವನನ್ನು ಒಡಗೊಂಡು ಬಡ । ಶರಧಿ ಮಧ್ಯದಿ ಇರುವ ಬಕದಾಲ್ಭ್ಯ ಮುನಿ ಕೂಡಿ ಗಜನಗರಿಗೈತಂದರು ॥೧॥

ಭಾಮಿನಿ

ಧರಣಿಪತಿ ಕೇಳ್ ಧರ್ಮರಾಯನು । ತುರಗಮೇಧಾಧ್ವರವ ನಡೆಸುತ ।

ಹರಿಗೆ ಯಜ್ಞದ ಫಲವ ಧಾರೆಯನೆರೆದ ವೈಭವದಿ ।। ಹರುಷದಿಂ ತೊಂಭತ್ತು ವರುಷದ । ವರೆಗೆ ಸಾಮ್ರಾಜ್ಯಾಧಿಪತ್ಯವ । ಕರಿಪುರದಿ ಗೈಯುತ್ತಲಿದ್ದನು ಹರಿಯು ಕರುಣೆಯಲಿ ।।೧।।

ಮಂಗಲಪದ

ಅಹೇರಿ, ಝಂಪೆತಾಳ

ಮಂಗಳಂ । ಜಯ । ಮಂಗಳಂ ।।ಪ।। ಕರಿಮುಖ ಉಮಾಸುತಗೆ । ಸುರವರ ಮಹೇಶನಿಗೆ । ಸಿರಿ ರಮಣ ಶ್ರೀ ಹರಿಗೆ । ಸರ್ವಾತ್ಮಗೆ ।। ವರದೆ ಶಾರದೆಯಳಿಗೆ। ಭರದೆ ಭಾರತಿಯಳಿಗೆ । ತ್ವರದೆ ಕದಳಿಯಕ್ಷೇತ್ರ । ಸರ್ವೇಶಗೆ ।।ಮಂಗಳಂ।।೧।।

ಮಂಗಲಮಸ್ತು
ಅಶ್ವಮೇಧ ಪರ್ವವು
ಸಮಾಪ್ತವಾದುದು

ಶ್ರೀಮನ್ಮಹಾಭಾರತದೊಳಗಿನ

ಅಶ್ವಮೇಧ ಪರ್ವ

(ಯಕ್ಷಗಾನ)

-: ಪಾತ್ರಗಳು :-

ಧರ್ಮರಾಯ
ವೇದವ್ಯಾಸ ಋಷಿ
ಶ್ರೀಕೃಷ್ಣ
ಅರ್ಜುನ
ಹಂಸಧ್ವಜ
ಸುಧನ್ವ
ಪ್ರಭಾವತಿ
ಪ್ರಮೀಳೆ
ಭೀಷಣ ರಾಕ್ಷಸ
ಬಭ್ರುವಾಹನ
ಚಿತ್ರಾಂಗದಾ
ಚಾರ-ಚಾರಿಣಿಯರು.

Scanned by CamScanner

ಒಪ್ಪೋಲೆ

ಪುಟ	ಸಾಲು	ತಪ್ಪು	ಒಪ್ಪು
5	೧೨	ಮೆದು	ವೆಂದು
6	೧೬	ಯನ್ನು	ಯನು
6	೪	ಸಿ	ನಿ
6	೧೩	ಪಾದ	ವಾದ
6	೧೭	ದಿನ	ಸಿನ
6	೧೭	ಭೊರೆ	ಘೊರೆ
6	೧೯	ಕೃವೆ	ಕೃಪೆ
9	೫	ಯತೆ	ಯಂತೆ
9	೧೨	ಮುಂದಾಗಿ	ಮುಂದಾಗೆ
11	೧೯	ಅನ	ಅನು
16	೮	ಸಾರಥ	ಸಾರಥ್ಯ
16	೧೦	ದನ್ಯ	ದನ
16	೨೧	ಗಾಡ	ಗಾಢ

ವಿಷ್ಣು ಪ್ರೀತ್ಯರ್ಥವಾಗಿ ನಡೆಯುವ ಸರ್ವ ದಾನ-ಮಾನ, ಜಪ-ತಪ, ವ್ರತ-ಕಥೆ ಮುಂತಾದ ಸಮಸ್ತ ಕಾರ್ಯದಲ್ಲಿಯೂ ಕೂಡ ಪ್ರಕೃತ ಯಕ್ಷಗಾನ ನಡೆಸಿ, ಶ್ರವಣ-ಸ್ಮರಣಾದಿಗಳಿಂದ ಶ್ರೀಹರಿಯ ಪ್ರೀತಿಗೆ ಪಾತ್ರರಾಗಿ ಸಕಲ ದುಃಖವನ್ನೂ ಕಳೆದು, ಐಶ್ವರ್ಯಾಭಿವೃದ್ಧಿ ಹೊಂದಿ ಸುಖಿಸುವದು.

– ಪ್ರಕಾಶಕರು

Scanned by CamScanner

ಲೇಖಕರ ಇತರ ಕೃತಿಗಳು

ಬಾಳಿನ ಸುಳಿ (ಕಾದಂಬರಿ) 1957

ನಾವು ಕಂಡೂಕಾಣದಂತಿರುವ ಅಸಡ್ಡೆ ಮಾಡುತ್ತಿರುವ ತೀರ ಸಣ್ಣ ಸಣ್ಣ ಕಾರಣಗಳೂ, ಘಟನೆಗಳೂ ಮಕ್ಕಳ ಮೃದು ಮನಸ್ಸಿನ ಮೇಲೆ ಎಂತೆಂತಹ ಭಯಂಕರ ಪರಿಣಾಮ ಮಾಡುತ್ತವೆ ಎಂಬುದನ್ನು ಕೆಲವೇ ಆದರೂ ಇಲ್ಲಿ ಎತ್ತಿ ತೋರಿಸಲು ಯತ್ನಿಸಿದ್ದೇನೆ..... (ಮೊದಲ ಮಾತು)

ವನಿತಾ ಕಂಠಾಭರಣ (ಭಕ್ತಿಗೀತೆ) 1959

ನಮ್ಮ ವೈಯಕ್ತಿಕ ಸಾಂಸಾರಿಕ ವಿಪ್ಲವಗಳು ಮನವನ್ನು ಕಡಿ ಮುದುಡಿಸಿದಾಗ ಶಾಂತಿಧಾರೆಯಿಂದ ಅರಳಿಸಿ ಜೀವನಕ್ಕೆ ನೆಮ್ಮದಿಯ ಆವರಣವನ್ನು ಒದಗಿಸುವದು ಪರಮಾತ್ಮನ ಸ್ಮರಣೆ. (ನಾಲ್ಕು ಮಾತು)

ವನಿತಾ ಗೀತಮಾಲಾ (ಭಕ್ತಿಗೀತೆ) 1960

ಪ್ರಸ್ತುತ ಕೃತಿ ಋಜು ಪಥವಿಡಿದು ಕ್ರಮಿಸಲು ತಡೆಯೊದಗದಂತೆ ಪರಾತ್ಪರ ಶಕ್ತಿಯನ್ನು ಪ್ರಾರ್ಥಿಸುವ ಪದ್ಯಗಳ ಸಂಕಲನವಾಗಿದ್ದು ಭಕ್ತಿ ಗೀತೆಗಳ ಮಹಿಳಾವಾಙ್ಮಯಕ್ಕೆ ನಿವೇದಿಸಿದ ಒಂದು ಪುಟ್ಟ ಕಾಣಿಕೆಯಾಗಿದೆ (ನಿವೇದನೆ)

ವನಿತಾ ಕವಿತಾ ಮಂಜರಿ [ಭಕ್ತಿಗೀತೆ] 1971

ಅನೇಕ ಪದ್ಯಗಳಿಗೆ ಆಧುನಿಕ ಸಿನೆಮಾ ಧಾಟಿಯನ್ನು ಹೊಂದಿಸ ಲಾಗಿದ್ದು, ಆ ದೃಷ್ಟಿಯಿಂದಲಾದರೂ ದೇವರ ಸಂಕೀರ್ತನೆ ನಡೆಯಲೆಂದು ಆಶಿಸಿದ್ದೇನೆ. [ಒಂದು ಮಾತು]

ಕಲಿ ಕರ್ಣ [ಮಕ್ಕಳ ನಾಟಕ] 1962

ಕರ್ಣ ಕಡುಗಲಿ, ದೈವಭಕ್ತ, ದಾನಶೂರ, ಆದರೆ ಸೂತರಲ್ಲಿ ಬೆಳೆದು ದುರ್ಯೋಧನನ ಅಧರ್ಮ ಪಕ್ಷ ಸೇರಿ ತನ್ನ ತಮ್ಮಂದಿರೊಡನೆ ಹೋರಾಡ ಬೇಕಾಯಿತು.... [ಎರಡು ಮಾತು]

ಶ್ರೀ ಕೃಷ್ಣ ಸಂಧಾನ [ಮಕ್ಕಳ ನಾಟಕ] 1962

ಶ್ರೀ ಕೃಷ್ಣ ಸಂಧಾನ ಮಹಾಭಾರತದ ಉದ್ಯೋಗಪರ್ವದಲ್ಲಿಯ ಆಕರ್ಷಕ ಪ್ರಸಂಗ. [ಮೂರು ಮಾತು]

ತೆರೆದ ತೆರೆ [ಕಥಾ ಸಂಕಲನ] 1964

ಸಮಸ್ಯೆ ಸಮಸ್ಯೆ ಸಮಸ್ಯೆ! ಎಲ್ಲಿ ನೋಡಿದರೂ ಸಮಸ್ಯೆ. [ಮುನ್ನುಡಿ]

[ಅಚ್ಚಿನಲ್ಲಿ] **ಕಾಮನ ಬಿಲ್ಲು** [ಶಿಶುಗೀತೆಗಳ ಸಂಕಲನ]

Scanned by CamScanner